# ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು)
2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 675 (735)
3. ಉತ್ತರಿಸಬೇಕಾದ ದಿನಾಂಕ :13-07-2023
4. ಉತ್ತರಿಸುವ ಸಚಿವರು :ಮಾನ್ಯ ಮುಖ್ಯ ಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರಿಗೆ ನಗದು ರಹಿತ ವೈದ್ಯಕೀಯ ಸೇವೆ ಕಲ್ಪಿಸುವ ಯೋಜನೆ ಜಾರಿಯಾಗಿದೆಯೇ; | ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ರಾಜ್ಯ ಸರ್ಕಾರವು ರೂಪಿಸಿರುವ ನಗದು ರಹಿತ "ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (KASS)"ಯ ಅನುಷ್ಠಾನಗೊಳಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಈ ಸಂಬಂಧ ದಿನಾಂಕ:17.08.2021ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2020 ರಿಂದ ಪ್ರಾರಂಭಿಸಿ ಹಂತ ಹಂತವಾಗಿ ನಿರ್ದೇಶನ/ ಮಾರ್ಗಸೂಚಿಗಳನ್ನು ಹೊರಡಿಸಲಾಗುತ್ತಿದೆ. |
| ಆ) | ಪ್ರಸ್ತುತ ಈ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳಿಗೆ ವೈದ್ಯಕೀಯ ಸೇವೆ ಒದಗಿಸಲು ನಿಗಧಿಪಡಿಸಿರುವ ಆಸ್ಪತ್ರೆಗಳು ಯಾವುವು; (ಪಟ್ಟಿ ಒದಗಿಸುವುದು) | ದಿನಾಂಕ: 09.03.2023ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 16 ಎಸ್‌ಎಂಆರ್ 2020 (ಭಾ-5) ರಲ್ಲಿ ಈಗಾಗಲೇ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್(SAST) ನ ವಿವಿಧ ಯೋಜನೆಗಳಡಿಯಲ್ಲಿ ಮತ್ತು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರಡಿ ನೊಂದಾಯಿತವಾಗಿರುವ (ಜ್ಯೋತಿ ಸಂಜೀವಿನಿ ಯೋಜನೆ ಸೇರಿದಂತೆ) ಖಾಸಗಿ ಆಸ್ಪತ್ರೆಗಳನ್ನು KASS ಯೋಜನೆಯಡಿ ಭಾವಿತ ನೋಂದಾವಣೆಗೆ (Deemed Empanelment) ಒಳಪಡಿಸಲು ಅನುಮತಿಸಲಾಗಿದೆ. ನಗದು ರಹಿತ ಆರೋಗ್ಯ ಸೇವೆಯನ್ನು ಜಾರಿಗೆ ತರಲು ಖಾಸಗಿ ಆಸ್ಪತ್ರೆಗಳ ಜೊತೆ ನೂತನವಾಗಿ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ಕಾರ್ಯವು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್(SAST) ನಲ್ಲಿ ಪ್ರಗತಿಯಲ್ಲಿರುತ್ತದೆ. |

| | | |
|---|---|---|
| ಇ) | ಸದರಿ ಯೋಜನೆಯಡಿಯಲ್ಲಿ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರಿಗೆ ಸಿಗುವ ವೈದ್ಯಕೀಯ ಸೇವೆಗಳು ಮತ್ತು ಸೌಲಭ್ಯಗಳ ವಿವರಗಳೇನು; | ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (KASS) ಗೆ ಸಂಬಂಧಿಸಿದ ಕಾರ್ಯನೀತಿ ಮತ್ತು ಪ್ರಾರಂಭಿಕ ಸೂಚನೆಗಳನ್ನು ದಿನಾಂಕ:05.09.2022 ರ ಸರ್ಕಾರದ ಆದೇಶ ಸಂಖ್ಯೆ.ಸಿಆಸುಇ 16 ಎಸ್‌ಎಂಆರ್ 2020 ರಲ್ಲಿ ನೀಡಲಾಗಿದೆ. ಸದರಿ ಆದೇಶದಲ್ಲಿ ಈ ಯೋಜನೆಯಡಿಯಲ್ಲಿ ರೂಪಿಸಿರುವ ವೈದ್ಯಕೀಯ ಸೇವೆಗಳಿಗೆ ಸಂಬಂಧಿಸಿರುವ ವಿವರಗಳನ್ನು ಸಹ ನೀಡಲಾಗಿದೆ. (ಪ್ರತಿ ಲಗತ್ತಿಸಿದೆ). |
| ಈ) | ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರಿಗೆ ನಗದು ರಹಿತ ಉತ್ಕೃಷ್ಟ ವೈದ್ಯಕೀಯ ಸೇವೆ ಸಕಾಲದಲ್ಲಿ ಲಭ್ಯವಾಗುವಂತಾಗಲು ಸರ್ಕಾರ ರೂಪಿಸಿರುವ ನಿಯಮ ಹಾಗೂ ಮಾನದಂಡಗಳೇನು? | ಕರ್ನಾಟಕ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ರಾಜ್ಯ ಸರ್ಕಾರವು ರೂಪಿಸಿರುವ ನಗದು ರಹಿತ "ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (KASS)"ಯನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ಭಾಗವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.<br><br>ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರಿಗೆ ನಗದು ರಹಿತ ಉತ್ಕೃಷ್ಟ ವೈದ್ಯಕೀಯ ಸೇವೆ ಸಕಾಲದಲ್ಲಿ ಲಭ್ಯವಾಗುವಂತಾಗಲು ದಿನಾಂಕ:17.08.2021 ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2020 ರಿಂದ ಪ್ರಾರಂಭಿಸಿ ಹಂತ ಹಂತವಾಗಿ ನಿರ್ದೇಶನ/ ಮಾರ್ಗಸೂಚಿಗಳನ್ನು ಹೊರಡಿಸಲಾಗುತ್ತಿದೆ. |

ಇ-ಕಡತ ಸಂಖ್ಯೆ: ಸಿಆಸುಇ 80 ಎಸ್‌ಎಂಆರ್ 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ನೂತನ '**ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ**'ಯನ್ನು (THE KARNATAKA AROGYA SANJEEVINI SCHEME – KASS) ಜಾರಿಗೊಳಿಸುವ ಕಾರ್ಯನೀತಿ (POLICY FRAMEWORK) ಬಗ್ಗೆ ಕೆಲವು ಆರಂಭಿಕ ಸೂಚನೆಗಳು.

**ಉಲ್ಲೇಖ:**

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2020 ದಿನಾಂಕ: 17.08.2021.
2. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, (SAST) ಬೆಂಗಳೂರು ಇವರ ಪತ್ರ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/ಎಸ್‌ಎಎಸ್‌ಟಿ/ಎಂಎಂ-23/2021-22. ದಿನಾಂಕ: 27.1.2022.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2020 ದಿನಾಂಕ: 15.06.2022.
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2020 ದಿನಾಂಕ: 11.07.2022.

***

**ಪ್ರಸ್ತಾವನೆ:**

1. ಪ್ರಸ್ತುತ ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 [THE KARNATAKA GOVERNMENT SERVANTS (MEDICAL ATTENDANCE) RULES 1963] ರನ್ವಯ (1963ರ ನಿಯಮಗಳು) ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಸರ್ಕಾರಿ ನೌಕರರು ಸರ್ಕಾರದ ಮಾನ್ಯತೆ ಹೊಂದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಮರುಪಾವತಿಯನ್ನು ಸಿ.ಜಿ.ಹೆಚ್.ಎಸ್. (CGHS) ದರಪಟ್ಟಿಯನ್ವಯ ಆಯಾ ಇಲಾಖಾ ಹಂತದ ನಿಯಂತ್ರಣಾಧಿಕಾರಿಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಕೆಲವು ತುರ್ತು ಸಂದರ್ಭಗಳಲ್ಲಿ ನೋಂದಾಯಿತವಲ್ಲದ ಖಾಸಗಿ ಆಸ್ಪತ್ರೆಗಳಲ್ಲಿ ಒಳರೋಗಿಯಾಗಿ ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಮರುಪಾವತಿಯನ್ನು ಸರ್ಕಾರದ ಹಂತದಲ್ಲಿ ನಿಯಮ ಸಡಿಲಿಸಿ ಮಂಜೂರು ಮಾಡಲಾಗುತ್ತಿದೆ. ಇದಲ್ಲದೆ ಹೊರರೋಗಿ ಚಿಕಿತ್ಸೆಗಳಿಗೆ (OPD) ಸರ್ಕಾರವು ಗುರುತಿಸಿರುವ 19 ದೀರ್ಘಕಾಲಿಕ ಖಾಯಿಲೆಗಳ ಚಿಕಿತ್ಸೆಗೆ ಸಂಬಂಧಿಸಿದಂತೆ ಸರ್ಕಾರಿ ನೌಕರರು ಭರಿಸಿದ ವೆಚ್ಚವನ್ನು ಮರುಪಾವತಿಸಲಾಗುತ್ತಿದೆ. ಈ ನಿಯಮಗಳಡಿ ಸರ್ಕಾರದಿಂದ ಅಂದಾಜು 500 ಖಾಸಗಿ ಆಸ್ಪತ್ರೆಗಳು ಹಾಗೂ 27 ವೈದ್ಯಕೀಯ ರೋಗ ನಿರ್ಧಾರ ಕೇಂದ್ರಗಳನ್ನು (Diagnostics Centres) ಅಧಿಸೂಚಿಸಲಾಗಿದೆ. ಇದಲ್ಲದೇ ಸರ್ಕಾರಿ ನೌಕರರು ಹಾಗೂ

ಅವರ ಕುಟುಂಬದ ಸದಸ್ಯರು ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶವಿದೆ.

2. ಮುಂದುವರೆದು, ರಾಜ್ಯ ಸರ್ಕಾರವು 2015ರಲ್ಲಿ ಆರಂಭಿಸಿದ "ಜ್ಯೋತಿ ಸಂಜೀವಿನಿ" ಯೋಜನೆಯಡಿಯಲ್ಲಿ ಏಳು ಮಾರಣಾಂತಿಕ ಖಾಯಿಲೆಗಳಾದ ಹೃದ್ರೋಗ, ನರರೋಗ, ಕ್ಯಾನ್ಸರ್, ಮೂತ್ರಪಿಂಡ ರೋಗ, ಸುಟ್ಟಗಾಯ, ಅಪಘಾತ, ನವಜಾತ ಶಿಶು ಹಾಗೂ ಚಿಕ್ಕ ಮಕ್ಕಳ ಖಾಯಿಲೆಗಳಿಗೆ ಸಂಬಂಧಿಸಿದಂತೆ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ಜ್ಯೋತಿ ಸಂಜೀವಿನಿ ಯೋಜನೆಯಡಿ ನೊಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ಯೋಜನೆಯಡಿ 262 ಖಾಸಗಿ ಆಸ್ಪತ್ರೆಗಳನ್ನು ಅಧಿಸೂಚಿಸಲಾಗಿದೆ.

3. ಈಗಿರುವ ವ್ಯವಸ್ಥೆಯಲ್ಲಿ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ವೈದ್ಯಕೀಯ ಚಿಕಿತ್ಸೆಯನ್ನು ಪಡೆಯುವಲ್ಲಿ ಹಾಗೂ ಅವರು ಭರಿಸಿದ ವೈದ್ಯಕೀಯ ಚಿಕಿತ್ಸಾ ವೆಚ್ಚದ ಮರುಪಾವತಿ ಪಡೆಯುವಲ್ಲಿ ಅನುಸರಿಸಬೇಕಾದ ಕ್ಲಿಷ್ಟಕರ ವಿಧಿ ವಿಧಾನಗಳು ಹಾಗೂ ವಿಳಂಬ, ಹೊಸ ಚಿಕಿತ್ಸಾ ವಿಧಾನಗಳು ಲಭ್ಯವಿಲ್ಲದೇ ಇರುವುದು, ಖಾಸಗಿ ಆಸ್ಪತ್ರೆಗಳು ಸರ್ಕಾರಿ ನೌಕರರಿಗೆ ಚಿಕಿತ್ಸೆ ನೀಡುವಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿರುವುದು ಮತ್ತು ಖಾಸಗಿ ಆಸ್ಪತ್ರೆಗಳು ಸಿಜಿಎಚ್‌ಎಸ್ ದರಗಳಿಗಿಂತ ಹೆಚ್ಚಿನ ದರಗಳನ್ನು ವಿಧಿಸುತ್ತಿರುವುದು ಮುಂತಾದ ಹಲವಾರು ತೊಂದರೆಗಳನ್ನು ಅನುಭವಿಸುತ್ತಿರುವುದನ್ನು ಗಮನಿಸಲಾಗಿದೆ. ಇದಲ್ಲದೆ, ಒಂದೇ ಚಿಕಿತ್ಸೆಗೆ ಬೇರೆ ಬೇರೆ ಆಸ್ಪತ್ರೆಗಳು ವಿಭಿನ್ನ ದರಗಳನ್ನು ವಿಧಿಸುತ್ತಿರುವುದು, ಲಾಭದ ಉದ್ದೇಶದಿಂದ ಅನಾವಶ್ಯಕವಾಗಿ ರೋಗಿಗಳನ್ನು ವೈದ್ಯಕೀಯ ತಪಾಸಣೆ ಮತ್ತು ಚಿಕಿತ್ಸೆಗಳಿಗೆ ಒಳಪಡಿಸುತ್ತಿರುವುದು ಹಾಗೂ ಅನಾವಶ್ಯಕ ಮತ್ತು ದುಬಾರಿ ಔಷಧಿಗಳನ್ನು ಶಿಫಾರಸ್ಸು ಮಾಡುತ್ತಿರುವುದು ಮುಂತಾದ ಇತರೆ ಕೆಲವು ನ್ಯೂನ್ಯತೆಗಳು ಕೂಡ ಸರ್ಕಾರದ ಗಮನಕ್ಕೆ ಬಂದಿರುತ್ತವೆ.

4. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು 2020-21ನೇ ಹಾಗೂ 2021-22ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ಶಸ್ತ್ರಚಿಕಿತ್ಸಾ ವಿಧಾನಗಳಿಗೆ ನಗದು ರಹಿತ ಚಿಕಿತ್ಸೆ ಒದಗಿಸುವ ಒಂದು ನೂತನ ಯೋಜನೆಯನ್ನು ಘೋಷಿಸಿರುತ್ತದೆ. ಈ ನೂತನ ಯೋಜನೆಯನ್ನು ರೂಪಿಸುವ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆರ್ಥಿಕ ಇಲಾಖೆ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನೊಂದಿಗೆ ಹಲವಾರು ಬಾರಿ ಸಮಾಲೋಚಿಸಲಾಗಿದೆ. ಅಂತಿಮವಾಗಿ, ರಾಜ್ಯ ಸರ್ಕಾರಿ ನೌಕರರಿಂದ ಮಾಸಿಕ ವಂತಿಕೆಯನ್ನು ಒಳಗೊಂಡ **'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ'** (THE KARNATAKA AROGYA SANJEEVINI SCHEME – KASS) ಎಂಬ ಮಹತ್ವಾಕಾಂಕ್ಷಿ ನೂತನ ಯೋಜನೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರವು ನಿರ್ಧರಿಸಿ, ಈ ಸಂಬಂಧ ಒಂದು ವಿಸ್ತೃತ ಯೋಜನಾ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವಂತೆ, ಕೆಲವು ನಿರ್ದಿಷ್ಟ ಉಲ್ಲೇಖಾಂಶಗಳೊಂದಿಗೆ (Terms of Reference-TOR) ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರನ್ನು ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕೋರಲಾಗಿತ್ತು.

5. ಅದರಂತೆ ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರು ಈ ಯೋಜನೆಯ ವಿಸ್ತೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಯೋಜನಾ ವರದಿಯಲ್ಲಿನ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್ಎಂಆರ್ 2020**
**ದಿನಾಂಕ:05.09.2022**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಸರ್ಕಾರಕ್ಕೆ ಸಲ್ಲಿಸಿರುವ ಯೋಜನಾ ವರದಿಯನ್ನು ಸರ್ಕಾರವು ಪರಿಶೀಲಿಸಿ, ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಕುಟುಂಬದ ಸದಸ್ಯರಿಗೆ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಲು ನೂತನ **'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' (KASS)** ಯನ್ನು ಅನುಷ್ಠಾನಗೊಳಿಸುವ ಸಂಬಂಧ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

1. ನೂತನ **"ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (KASS)"** ಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, (SAST) ಬೆಂಗಳೂರು ಈ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲು ಸರ್ಕಾರವು ಆದೇಶಿಸಿದೆ.

   **ಈ ಯೋಜನೆಯ ವಾಸ್ತವ ಕಾರ್ಯಾಚರಣೆಯು (Implementation) ಸರ್ಕಾರ ನಿರ್ಧರಿಸುವ ದಿನಾಂಕದಿಂದ ಜಾರಿಗೆ ಬರುತ್ತದೆ.**

2. ಸರ್ಕಾರಿ ನೌಕರರ ಹಾಗೂ ಅವರ ಕುಟುಂಬದ ಸದಸ್ಯರ ನೊಂದಣಿ ಪ್ರಕ್ರಿಯೆ, ತಂತ್ರಜ್ಞಾನ ಅಭಿವೃದ್ಧಿ, ಖಾಸಗಿ ಆಸ್ಪತ್ರೆಗಳೊಂದಿಗೆ ನೊಂದಾವಣೆ ಪ್ರಕ್ರಿಯೆ, ಖಾಸಗಿ ವೈದ್ಯರು ಮತ್ತು ಖಾಸಗಿ ಆಸ್ಪತ್ರೆಗಳ ಸ್ಪಂದನೆ, ಆಯವ್ಯಯ ಬೇಡಿಕೆ, ಸರ್ಕಾರಿ ನೌಕರರ ಅನಿಸಿಕೆ/ಪ್ರತಿಕ್ರಿಯೆ/ಕುಂದು ಕೊರತೆಗಳು, ಯೋಜನೆಯ ಆರಂಭಿಕ ಅನುಷ್ಠಾನದಿಂದ ಲಭ್ಯವಾಗುವ ಅನುಭವ, ಮುಂತಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯನ್ನು ಹಂತ ಹಂತವಾಗಿ ವಿಸ್ತರಿಸಿ ಜಾರಿಗೊಳಿಸಲಾಗುವುದು.

3. ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರು ವೈದ್ಯಕೀಯ ಚಿಕಿತ್ಸೆ ಪಡೆಯಲು ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ಗಳಿಗೆ ತಿದ್ದುಪಡಿ ಕೈಗೊಳ್ಳುವುದನ್ನು ಬಾಕಿ ಇಟ್ಟು ಈ ಯೋಜನೆಯನ್ನು ರೂಪಿಸಲಾಗಿದೆ.

4. ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ಪಡೆಯುವ ವೈದ್ಯಕೀಯ ಚಿಕಿತ್ಸೆ ಮತ್ತು ಚಿಕಿತ್ಸಾ ವೆಚ್ಚ ಮರುಪಾವತಿಗೆ ಸಂಬಂಧಿಸಿದಂತೆ **ಸಂದರ್ಭಾನುಸಾರ** ಪ್ರಸ್ತುತ ಜಾರಿಯಲ್ಲಿರುವ 1963 ರ ನಿಯಮಗಳು ಹಾಗೂ ನೂತನ KASS ಯೋಜನೆ ಎರಡೂ ಜಾರಿಯಲ್ಲಿರುತ್ತವೆ. ಯೋಜನೆಗೆ

ಸಂಬಂಧಿಸಿದಂತೆ ಯಾವುದೇ ಸಂದೇಹ ಉಂಟಾದಲ್ಲಿ ರಾಜ್ಯ ಸರ್ಕಾರದ ಸ್ಪಷ್ಟೀಕರಣ ಕೋರತಕ್ಕದ್ದು, ಈ ವಿಷಯದಲ್ಲಿ ಸರ್ಕಾರದ ತೀರ್ಮಾನ ಅಂತಿಮವಾಗಿರುತ್ತದೆ.

5. **ಅನ್ವಯಿಕೆ : (Applicability): 1963 ರ ನಿಯಮಗಳು ಅನ್ವಯವಾಗುವ ರಾಜ್ಯ ಸರ್ಕಾರಿ ನೌಕರರು ಮಾತ್ರ ಈ ಯೋಜನೆಗೆ ಒಳಪಡುತ್ತಾರೆ.**

a. ಸಾರ್ವಜನಿಕ ವಲಯದ (Public Sector Establishments) ಇತರೆ ನೌಕರರು ಅಂದರೆ, ಸ್ಥಳೀಯ ಸಂಸ್ಥೆ, ಸ್ವಾಯತ್ತ ಸಂಸ್ಥೆಗಳು, ಅನುದಾನಿತ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಶಾಸನ ಬದ್ಧ ಸಂಸ್ಥೆಗಳು, ಗುತ್ತಿಗೆ/ಹೊರಗುತ್ತಿಗೆ ನೌಕರರು, ಅರೆಕಾಲಿಕ ನೌಕರರು, ದಿನಗೂಲಿ ನೌಕರರು ಈ ಯೋಜನೆಗೆ ಒಳಪಡುವುದಿಲ್ಲ.

b. ಈಗಾಗಲೇ ಬೇರೆ ಆರೋಗ್ಯ ಯೋಜನೆಯಡಿ ಒಳಪಟ್ಟ ಸರ್ಕಾರಿ ನೌಕರರು (ಉದಾ: ಪೊಲೀಸ್ ಇಲಾಖೆಯಲ್ಲಿನ 'ಆರೋಗ್ಯ ಭಾಗ್ಯ' ಯೋಜನೆಗೆ ಒಳಪಟ್ಟ ಸರ್ಕಾರಿ ನೌಕರರು) ಈ ಯೋಜನೆಗೆ ಒಳಪಡುವುದಿಲ್ಲ.

c. ರಾಜ್ಯ ಸೇವೆಯಲ್ಲಿ ನಿಯೋಜನೆ/ಎರವಲು ಸೇವೆಯ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಕೇಂದ್ರ ಸರ್ಕಾರಿ ನೌಕರರು, ಸಾರ್ವಜನಿಕ ವಲಯದ ಸ್ಥಾಪನೆಯ (Establishment in Public Sector) ನೌಕರರು ಈ ಯೋಜನೆಗೆ ಒಳಪಡುವುದಿಲ್ಲ.

"ಸಾರ್ವಜನಿಕ ವಲಯದ ಸ್ಥಾಪನೆ" ಎಂದರೆ ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 5 ರಲ್ಲಿ ನಿರ್ಧಿಷ್ಟಪಡಿಸಲಾದ ಸ್ಥಾಪನೆಗಳ ನೌಕರರು.

d. ಎರವಲು ಸೇವೆ/ನಿಯೋಜನೆ ಮೇರೆಗೆ ರಾಜ್ಯದ ವಿವಿಧ ಇಲಾಖೆಗಳಲ್ಲಿ ಹಾಗೂ ಸಾರ್ವಜನಿಕ ವಲಯದ ಸ್ಥಾಪನೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಈ ಯೋಜನೆಗೆ ಒಳಪಡುತ್ತಾರೆ.

e. ಕರ್ನಾಟಕ ನಾಗರಿಕ ಸೇವೆಗಳ ಕಾಯ್ದೆ 1978 ರಡಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರವು ಈ ಯೋಜನೆಯನ್ನು ಅಳವಡಿಸಿಕೊಂಡಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಹಾಗೂ ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ ಸಚಿವಾಲಯದ ನೌಕರರು ಈ ಯೋಜನೆಗೆ ಒಳಪಡುತ್ತಾರೆ.

f. ವೈದ್ಯಕೀಯ ಚಿಕಿತ್ಸೆ ನೀಡುವ ಸಂಬಂಧ ರಾಜ್ಯ ಸರ್ಕಾರವು ರೂಪಿಸಿರುವ ಪ್ರತ್ಯೇಕ ನಿಯಮಗಳು ಅನ್ವಯವಾಗುವ ಇತರೆ ಯಾವುದೇ ವರ್ಗದ ವ್ಯಕ್ತಿಗಳಿಗೆ ಈ ಯೋಜನೆಯು ಅನ್ವಯವಾಗುವುದಿಲ್ಲ.

g. ನ್ಯಾಯಾಂಗ ಸೇವೆಯ ಅಧಿಕಾರಿಗಳು ಈ ಯೋಜನೆಗೆ ಒಳಪಡುವುದಿಲ್ಲ.

h. ರಾಜ್ಯ ಸೇವೆಯಲ್ಲಿರುವ ಅಖಿಲ ಭಾರತ ಸೇವೆಗೆ ಸೇರಿದ ಅಧಿಕಾರಿಗಳು (AIS) ಈ ಯೋಜನೆಗೆ ಒಳಪಡುವುದು ಐಚ್ಛಿಕವಾಗಿರುತ್ತದೆ.

i. ಸರ್ಕಾರಿ ನೌಕರ ಮತ್ತು ಆತನ ಕುಟುಂಬದ ಸದಸ್ಯರು ಅಧಿಕೃತವಾಗಿ ನೋಂದಣಿ ಮಾಡಿಕೊಂಡ ನಂತರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

6. ವೈದ್ಯಕೀಯ ಚಿಕಿತ್ಸೆ ಮತ್ತು ವೈದ್ಯಕೀಯ ವೆಚ್ಚ ಮರುಪಾವತಿಗೆ ಸಂಬಂಧಿಸಿದಂತೆ 1963 ರ ನಿಯಮಗಳ ನಿಯಮ 2ರಲ್ಲಿನ **"ಕುಟುಂಬ" (Family)** ಪದವನ್ನು ಅದೇ ವ್ಯಾಖ್ಯಾನದೊಂದಿಗೆ ಮುಂದುವರೆಸಲಾಗುವುದು.

   i. ಸರ್ಕಾರಿ ನೌಕರನ ಪತಿ ಅಥವಾ ಪತ್ನಿ

   ii ತಂದೆ ಮತ್ತು ತಾಯಿ (ಮಲ ತಾಯಿಯನ್ನೊಳಗೊಂಡಂತೆ) -ಅವರು ಸರ್ಕಾರಿ ನೌಕರನೊಂದಿಗೆ ಸಾಮಾನ್ಯವಾಗಿ ವಾಸವಾಗಿದ್ದಲ್ಲಿ ಮತ್ತು ಅವರ ಒಟ್ಟು ಮಾಸಿಕ ಆದಾಯ ಕನಿಷ್ಠ ಕುಟುಂಬ ಪಿಂಚಣಿ (ರೂ 8500/-) ಹಾಗೂ ಚಾಲ್ತಿಯಲ್ಲಿದ್ದ ತುಟ್ಟಿಭತ್ಯೆಯನ್ನು ಒಳಗೊಂಡ ಮೊತ್ತವನ್ನು ಮೀರದಿದ್ದಲ್ಲಿ ;

   iii. ಸರ್ಕಾರಿ ನೌಕರನ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ ಮಕ್ಕಳು (ದತ್ತು ಪಡೆದ ಮಕ್ಕಳು ಮತ್ತು ಮಲಮಕ್ಕಳನ್ನೊಳಗೊಂಡಂತೆ)

7. **ಅರ್ಹತಾದಾಯಕ ಮೊತ್ತ (Eligibility Amount)** ಅಂದರೆ KASS ಯೋಜನೆಯಡಿ ನಿಗದಿಪಡಿಸಲಾದ ವೈದ್ಯಕೀಯ ಚಿಕಿತ್ಸಾ ದರಗಳ ಮಿತಿಯಲ್ಲಿ ಲೆಕ್ಕ ಹಾಕಲಾದ ದರಗಳು. ಈ ಮೊತ್ತವನ್ನು SAST ನಿರ್ಧರಿಸುತ್ತದೆ.

8. **ತುರ್ತು ಸಂದರ್ಭಗಳು (Emergency)** ಅಂದರೆ ಈ ಆದೇಶದಲ್ಲಿ ನಮೂದಿಸಲಾದ ತುರ್ತು ಸಂದರ್ಭಗಳನ್ನು ಒಳಗೊಂಡಿರುತ್ತವೆ.

9. **ನೋಂದಾಯಿತ ವೈದ್ಯಕೀಯ ಸಂಸ್ಥೆಗಳು (Empaneled Medical Institutions)** ಅಂದರೆ ಈ ಯೋಜನೆಯಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಸರ್ಕಾರದಿಂದ ನೊಂದಾಯಿಸಲ್ಪಟ್ಟ ವೈದ್ಯಕೀಯ ಸಂಸ್ಥೆಗಳು. ಇದರಲ್ಲಿ ಖಾಸಗಿ ಹಾಗೂ ಸಾರ್ವಜನಿಕ ವಲಯದ ವೈದ್ಯಕೀಯ ಸಂಸ್ಥೆಗಳು ಕೂಡ ಒಳಗೊಳ್ಳುತ್ತವೆ.

10. **ನಿರ್ದಿಷ್ಟಪಡಿಸಲಾದ ವೈದ್ಯಕೀಯ ಚಿಕಿತ್ಸಾ ವಿಧಾನಗಳು (Specified Medical Procedures):** ಅಂದರೆ ಸರ್ಕಾರದಿಂದ ನಿರ್ದಿಷ್ಟಪಡಿಸಲಾಗಿರುವ ಮತ್ತು ಈ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿರುವ ವೈದ್ಯಕೀಯ ಚಿಕಿತ್ಸಾ ವಿಧಾನಗಳು.

11. **ನಿಗದಿಪಡಿಸಲಾಗಿರುವ ವೈದ್ಯಕೀಯ ಚಿಕಿತ್ಸಾ ದರಗಳು (Prescribed Rates for Medical Procedures):** ಅಂದರೆ ಸರ್ಕಾರದಿಂದ ಈ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿರುವ ವೈದ್ಯಕೀಯ ಚಿಕಿತ್ಸಾ ವಿಧಾನಗಳಿಗೆ ನಿಗದಿಪಡಿಸಲಾಗಿರುವ ದರಗಳು.

12. **ವೈದ್ಯಕೀಯ ಚಿಕಿತ್ಸೆ (Medical Treatment)**

**ಈ ಯೋಜನೆಯಡಿ ವೈದ್ಯಕೀಯ ಚಿಕಿತ್ಸೆ ಎಂದರೆ-**

ಯೋಜನೆಯ ವ್ಯಾಪ್ತಿಗೆ ಒಳಪಟ್ಟಿರುವ ಹಾಗೂ ಯೋಜನೆಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ:-

a. ಯಾವುದೇ ತಜ್ಞ ವೈದ್ಯರು ಸೇರಿದಂತೆ ವೈದ್ಯರೊಂದಿಗೆ ಯಾವುದೇ ವಿಧವಾದ **ಸಮಾಲೋಚನೆ** (Consultation with Doctor including any specialist doctor),

b. **ರೋಗ ನಿರ್ಧಾರ ವಿಧಾನಗಳು (Diagnostic Procedures)**: ಅಂದರೆ ವಿವಿಧ ಬಗೆಯ ವೈದ್ಯಕೀಯ ತಪಾಸಣೆಗಳು, (ರಕ್ತ ಪರೀಕ್ಷೆಗಳು, ಮಾದರಿ ಅಂಗಾಂಶ

ಪರೀಕ್ಷೆಗಳು, ಬಯಾಪ್ಸಿ, ಇತ್ಯಾದಿ); ಇಮೇಜಿಂಗ್ (ಎಕ್ಸ್ ರೇ, ಸಿಟಿ ಸ್ಕ್ಯಾನ್, ಇಸಿಜಿ, ಎಮ್‌ಆರ್‌ಐ, ರೇಡಿಯಾಲಜಿ, ಅಂಜಿಯೋಗ್ರಾಮ್, ಅಲ್ಟ್ರಾ ಸೌಂಡ್, ಇತ್ಯಾದಿ);

c. **ಹೊರರೋಗಿ ಚಿಕಿತ್ಸೆ (Outpatient Treatment)** ಈ ಯೋಜನೆಯಡಿ ಅವಕಾಶ ಕಲ್ಪಿಸಲಾಗಿರುವಂತೆ ಹೊರರೋಗಿ ಚಿಕಿತ್ಸಾ ವಿಧಾನಗಳು.

d. **ಒಳರೋಗಿ ಚಿಕಿತ್ಸೆ (Inpatient Treatment)** ಒಳರೋಗಿ ಚಿಕಿತ್ಸೆಗಳು ಈ ಕೆಳಕಂಡ ಚಿಕಿತ್ಸೆಗಳನ್ನು ಒಳಗೊಂಡಿರುತ್ತವೆ ಪರಂತು ಅವುಗಳಿಗೆ ಸೀಮಿತವಾಗಿರುವುದಿಲ್ಲ, (includes but not limited to-)

   i. ವೈದ್ಯಕೀಯ ಚಿಕಿತ್ಸೆ (Medical Management)

   ii. ಶಸ್ತ್ರ ಚಿಕಿತ್ಸಾ ವಿಧಾನಗಳು (Surgical procedures including implants)

   iii. ತುರ್ತು ಚಿಕಿತ್ಸೆ ಮತ್ತು ಅಪಘಾತದ ಸಂದರ್ಭಗಳಲ್ಲಿ ಪಡೆಯುವ ಚಿಕಿತ್ಸೆಗಳು (Emergency & Accidents)

   iv. ಹೆರಿಗೆ ಮತ್ತು ಶಿಶು ಆರೈಕೆ (Maternity and Childcare)

e. ಈ ಯೋಜನೆಗೆ ಒಳಪಡುವ ಔಷಧೋಪಚಾರ (Medication),

f. ವೈದ್ಯಕೀಯ ಹಾಗೂ ಶಸ್ತ್ರ ಚಿಕಿತ್ಸಾ ವಿಧಾನಗಳು (Medical and Surgical Procedures), Secondary (Simple and Complex), Tertiary (Tertiary and Emergency)

g. ಹಗಲು ಚಿಕಿತ್ಸಾ ಕೇಂದ್ರಗಳಲ್ಲಿ ಪಡೆಯಲಾಗುವ ಚಿಕಿತ್ಸೆಗಳು (Day care Centres ): ಈ ಕೆಳಕಂಡ ಚಿಕಿತ್ಸೆಗಳನ್ನು ಒಳಗೊಂಡಿರುತ್ತವೆ ಪರಂತು ಅವುಗಳಿಗೆ ಸೀಮಿತವಾಗಿರುವುದಿಲ್ಲ, (includes but not limited to-)

   i) ಕಿಮೊಥೆರಫಿ (Chemotherapy)
   ii) ಹೆಮೊಡಯಾಲಿಸಿಸ್ (Haemodialysis)
   iii) ಲಘು ವೈದ್ಯಕೀಯ ವಿಧಾನಗಳು (Minor Medical Procedures)
   iv) ಬಯಾಪ್ಸಿ (Biopsy)
   v) ಲಘು ಶಸ್ತ್ರ ಚಿಕಿತ್ಸೆಗಳು (Minor Surgeries like D&C, Tonsillectomy, Spinal injections, AV shunting etc.)
   vi) ಕಣ್ಣಿನ ಪೊರೆ ಶಸ್ತ್ರ ಚಿಕಿತ್ಸೆ (Cataract surgery)

h. ಕೆಲವು ವೈದ್ಯಕೀಯ ಉಪಕರಣಗಳ ಖರೀದಿ (ಉದಾ: ಕನ್ನಡಕ, ಶ್ರವಣ ಸಾಧನ, ಇತ್ಯಾದಿ)

i. ಅತಿ ವಿಶೇಷ, ವಿರಳ ಹಾಗೂ ಭಾರಿ ಚಿಕಿತ್ಸಾ ವೆಚ್ಚವನ್ನು ಒಳಗೊಂಡ ಚಿಕಿತ್ಸೆಗಳು: Special Treatment: Rare and High Cost Diseases: Organ transplantation, In-Vitro Fertilization, Special expensive procedures like Bariatric surgery, Neuro & Cochlear implants etc

j. ಉಪಶಾಮಕ ಆರೈಕೆ: Palliative Care ( ಮಾರಣಾಂತಿಕ ಖಾಯಿಲೆಯಿಂದಾಗಿ ಅಂತಿಮ ಹಂತ ತಲುಪಿದ ರೋಗಿಗಳಿಗೆ ನೀಡಲಾಗುವ ಚಿಕಿತ್ಸೆ).

k. ಆಯುರ್ವೇದ/ ಪ್ರಕೃತಿ ಚಿಕಿತ್ಸೆ, ಯೋಗ, ಯುನಾನಿ, ಹೋಮಿಯೋಪತಿ ಚಿಕಿತ್ಸೆಗಳು.

I. ಯೋಜನೆಯಲ್ಲಿ ನಿರ್ದಿಷ್ಟಪಡಿಲಾದ ಇತರೆ ಎಲ್ಲಾ ಚಿಕಿತ್ಸಾ ವಿಧಾನಗಳು (Specified Procedures)

**13. ವಿಶೇಷ ಚೇತನರಿಗೆ ವಿಶೇಷ ಸೌಲಭ್ಯಗಳು**

i. ಎಲ್ಲಾ ನೋಂದಾಯಿತ ಆಸ್ಪತ್ರೆಗಳಲ್ಲಿ ಆದ್ಯತೆಯ ಸೇವೆಗಳು ಮತ್ತು ಗಾಲಿಕುರ್ಚಿ(wheelchair) ಸೌಲಭ್ಯಗಳು)

ii. ವಿಶೇಷ ಚೇತನರಿಗೆ ಮೀಸಲಾದ ಸೇವೆಗಳನ್ನು ಒದಗಿಸುವ ಆಸ್ಪತ್ರೆಗಳ ಪಟ್ಟಿ.

iii. ವಿಶೇಷ ಚೇತನ ಸ್ನೇಹಿ ನೆರವು ಮತ್ತು ಉಪಕರಣಗಳನ್ನು ಒದಗಿಸುವ ಅಧಿಕೃತ ಕೇಂದ್ರಗಳ (authorized centres) ಪಟ್ಟಿ.

iv. THE RIGHTS OF PERSONS WITH DISABILITIES ACT, 2016 ರನುಸಾರ ವಿಕಲಚೇತನ ಸ್ನೇಹಿ ಉಪಕರಣಗಳನ್ನು ಒದಗಿಸುವುದು.

v. ಅಂಗವಿಕಲತೆಯ ಕಾಯಿಲೆಯನ್ನು ಗುಣಪಡಿಸಲು ಅಥವಾ ನಿವಾರಣೆಗಾಗಿ ನಗದುರಹಿತ ಚಿಕಿತ್ಸೆ.

vi. ಆಡಿಟರಿ-ವರ್ಬಲ್ ಥೆರಪಿ (AVT)

**14.** ಅಂಬ್ಯುಲೆನ್ಸ್ ಸೇವೆ. (Ambulance Service)

ಈ ಎಲ್ಲ ವೈದ್ಯಕೀಯ ಚಿಕಿತ್ಸೆಗಳು/ಸೇವೆಗಳು ಸಂದರ್ಭಾನುಸಾರ ನಗದು ರಹಿತವಾಗಿ ಅಥವಾ ಮರುಪಾವತಿಗೆ ಒಳಪಟ್ಟಿರುತ್ತವೆ.

**15. ವೈದ್ಯಕೀಯ ಸಂಸ್ಥೆ (Health Institutions)** ಎಂದರೆ ಯೋಜನೆಗೆ ಒಳಪಡುವ ಆರೋಗ್ಯ ಸೇವಾ ಸಂಸ್ಥೆಗಳು (HEALTH CARE PROVIDERS- HCP) :- ಅಂದರೆ ಸಾರ್ವಜನಿಕ ವಲಯದ ಹಾಗೂ ಖಾಸಗಿ ವಲಯದ ವೈದ್ಯಕೀಯ ಸಂಸ್ಥೆಗಳು: (ಖಾಸಗಿ ಕ್ಲಿನಿಕ್, ಫಾರ್ಮಸಿಗಳನ್ನು ಒಳಗೊಂಡಿರುವುದಿಲ್ಲ)

a. ಸಾಮಾನ್ಯ ಆಸ್ಪತ್ರೆಗಳು (General Hospitals)

b. ಏಕ, ಬಹು ತಜ್ಞ, ಮತ್ತು ವಿಶೇಷ ತಜ್ಞ ಆಸ್ಪತ್ರೆಗಳು (Single, Multi speciality, Super speciality Hospitals)

c. ವೈದ್ಯಕೀಯ ರೋಗ ನಿರ್ಧಾರ ಕೇಂದ್ರಗಳು (Diagnostic Centres): ಇವು ಪ್ರತ್ಯೇಕ (Stand alone) ಅಥವಾ ವೈದ್ಯಕೀಯ ಸಂಸ್ಥೆಗಳಲ್ಲಿರುವ ಹಾಗೂ ಟೈಅಪ್ ಕೇಂದ್ರಗಳು.

d. ಪ್ರಯೋಗಾಲಯಗಳು (Laboratory),

e. ಇಮೇಜಿಂಗ್ ಕೇಂದ್ರಗಳು,

f. ಕಣ್ಣಿನ ಚಿಕಿತ್ಸೆಯ ಆಸ್ಪತ್ರೆಗಳು,

g. ದಂತ ಚಿಕಿತ್ಸೆಯ ಆಸ್ಪತ್ರೆಗಳು,

h. ಹಗಲು ಚಿಕಿತ್ಸಾ ಕೇಂದ್ರಗಳು (Day care Centres)

i. ಡಯಾಲಿಸಿಸ್ ಕೇಂದ್ರಗಳು.

j. ಯೋಜನೆಗೆ ಒಳಪಟ್ಟ ಇತರೆ ಯಾವುದೇ ವೈದ್ಯಕೀಯ ಸಂಸ್ಥೆ

k. AVT

**16. ಸಾರ್ವಜನಿಕ ವೈದ್ಯಕೀಯ ಸಂಸ್ಥೆಗಳು: (Public Health Institutions)** ಅಂದರೆ,

a. ಎಲ್ಲಾ ಸರ್ಕಾರಿ ಆಸ್ಪತ್ರೆಗಳು- ಸಾಮಾನ್ಯ ಮತ್ತು ತಜ್ಞ ಆಸ್ಪತ್ರೆಗಳು.

b. ಸರ್ಕಾರಿ ಔಷಧಾಲಯಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು.

c. ತಾಲ್ಲೂಕು ಆಸ್ಪತ್ರೆಗಳು.

d. ಜಿಲ್ಲಾ ಆಸ್ಪತ್ರೆಗಳು.

e. ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳು (Autonomous Medical Institutions).

f. ವೈದ್ಯಕೀಯ ಶಿಕ್ಷಣ ಇಲಾಖೆಗೆ ಒಳಪಡುವ ವೈದ್ಯಕೀಯ ಸಂಸ್ಥೆಗಳು,

g. ವೈದ್ಯಕೀಯ ಸಂಶೋಧನಾ ಸಂಸ್ಥೆಗಳು ಹಾಗೂ ಇನ್ನಿತರೆ ಸಾರ್ವಜನಿಕ ವಲಯದ ಸಂಸ್ಥೆಗಳು.

h. ಆಯುಷ್ ಇಲಾಖೆಯ ವ್ಯಾಪ್ತಿಗೆ ಒಳಪಡುವ ಆಯುರ್ವೇದ, ಯುನಾನಿ, ಹೋಮಿಯೋಪತಿ ಹಾಗೂ ಇತರೆ ಸಂಸ್ಥೆಗಳು.

i. ಸ್ಥಳೀಯ ಸಂಸ್ಥೆಗಳಿಂದ ನಿರ್ವಹಿಸಲ್ಪಡುವ ವೈದ್ಯಕೀಯ ಸಂಸ್ಥೆಗಳು.

j. CENTRE FOR EXCELLENCE INSTITUTIONS.

k. ಯೋಜನೆಗೆ ಒಳಪಟ್ಟ ಇತರೇ ಯಾವುದೇ ಸಾರ್ವಜನಿಕ ವಲಯದ ವೈದ್ಯಕೀಯ ಸಂಸ್ಥೆಗಳು

**17. ಖಾಸಗಿ ವಲಯದ ವೈದ್ಯಕೀಯ ಸಂಸ್ಥೆಗಳು (Private Sector Health Institutions)**; ಅಂದರೆ ಯೋಜನೆಯಡಿ ವೈದ್ಯಕೀಯ ಚಿಕಿತ್ಸೆ ನೀಡಲು ನೋಂದಾಯಿಸಲ್ಪಟ್ಟಿರುವ (Empanelled) ಖಾಸಗಿ ಆಸ್ಪತ್ರೆಗಳು,

a. ನರ್ಸಿಂಗ್ ಹೋಂ (Nursing Home)

b. ಏಕ ಹಾಗೂ ಬಹು ತಜ್ಞ, ವಿಶೇಷ ತಜ್ಞ ಆಸ್ಪತ್ರೆಗಳು (Single, Multispeciality, Super speciality Hospitals)

c. ವೈದ್ಯಕೀಯ ರೋಗ ನಿರ್ಧಾರ ಕೇಂದ್ರಗಳು (Diagnostic Centres), ಪ್ರಯೋಗಾಲಯಗಳು (Laboratory), ಇಮೇಜಿಂಗ್ ಕೇಂದ್ರಗಳು,

d. ಕಣ್ಣಿನ ಚಿಕಿತ್ಸೆ ಆಸ್ಪತ್ರೆಗಳು,

e. ದಂತ ಚಿಕಿತ್ಸೆ ಆಸ್ಪತ್ರೆಗಳು,

f. ಹಗಲು ಚಿಕಿತ್ಸಾ ಕೇಂದ್ರಗಳು (Day care Centres),

g. ಡಯಾಲಿಸಿಸ್ ಕೇಂದ್ರಗಳು

h. ಆಯುರ್ವೇದ, ಯುನಾನಿ, ಪ್ರಕೃತಿ ಚಿಕಿತ್ಸೆ, ಹೋಮಿಯೋಪತಿ ಹಾಗೂ ಇತರೆ ವೈದ್ಯಕೀಯ ಸಂಸ್ಥೆಗಳು.

i. AVT CENTRES

j. Fertility clinics ( IVF)

k. ಯೋಜನೆಗೆ ಒಳಪಟ್ಟ ಇತರೇ ಯಾವುದೇ ಖಾಸಗಿ ವಲಯದ ವೈದ್ಯಕೀಯ ಸಂಸ್ಥೆಗಳು.

**18. ಖಾಸಗಿ ಆಸ್ಪತ್ರೆಗಳನ್ನು ಯೋಜನೆಯಡಿ ಒಳಪಡಿಸಿ ಮಾನ್ಯತೆ ನೀಡಿ ನೋಂದಾಯಿಸುವುದು: (Empanelment)**

1963ರ ನಿಯಮಗಳಂತೆ ಖಾಸಗಿ ಆಸ್ಪತ್ರೆಗಳನ್ನು ಹಾಗೂ ವೈದ್ಯಕೀಯ ತಪಾಸಣೆ ಕೇಂದ್ರಗಳನ್ನು ಅಧಿಸೂಚಿಸುವ ಕಾರ್ಯವನ್ನು ದಿನಾಂಕ: 19.07.2014 ರ ಸರ್ಕಾರದ ಆದೇಶ ಸಂ. DPAR 27 SMR 2013 ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವಹಿಸಲಾಗಿತ್ತು. ಈ ಆದೇಶವನ್ನು ಹಿಂಪಡೆದು ಅಂತಹ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು KASS ಯೋಜನೆಯಡಿ ಒಳಪಡಿಸುವ ಅಧಿಸೂಚನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಹೊರಡಿಸಲಾಗುವುದು. ಪ್ರಸ್ತುತ ಸರ್ಕಾರಿ ನೌಕರರಿಗೆ ಹಾಗೂ ಅವರ ಅವಲಂಬಿತ ಕುಟುಂಬದ ಸದಸ್ಯರಿಗೆ ವೈದ್ಯಕೀಯ ಚಿಕಿತ್ಸೆ ನೀಡಲು 1963ರ ನಿಯಮಗಳಡಿ ಅಧಿಸೂಚಿಸಲ್ಪಟ್ಟಿರುವ ಖಾಸಗಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ತಪಾಸಣೆ ಕೇಂದ್ರಗಳು SAST ನೊಂದಿಗೆ ಹೊಸ ಒಡಂಬಡಿಕೆಯನ್ನು (MOU) ಮಾಡಿಕೊಂಡು ಪುನರ್ ನೋಂದಣಿ ಮಾಡಿಕೊಳ್ಳತಕ್ಕದ್ದು.

ಪರಂತು, ಈ ಯೋಜನೆಗೆ ಒಳಪಡಲು ನಿಗದಿಪಡಿಸಲಾದ ಮಾನದಂಡಗಳನ್ನು ಪೂರೈಸಿರುವ ಹಾಗೂ ಯೋಜನೆಗೆ ಒಳಪಡಲು ಇಚ್ಛೆ ವ್ಯಕ್ತಪಡಿಸುವ ಖಾಸಗಿ ಆಸ್ಪತ್ರೆಗಳು - ಈಗಾಗಲೇ 1963 ರ ನಿಯಮಗಳಡಿ ರಾಜ್ಯ ಸರ್ಕಾರಿ ನೌಕರರಿಗೆ ವೈದ್ಯಕೀಯ ಚಿಕಿತ್ಸೆ ನೀಡಲು ನೋಂದಾಯಿತವಾಗಿರುವ, ಜ್ಯೋತಿ ಸಂಜೀವಿನಿ ಯೋಜನೆಯಡಿ ಹಾಗೂ SAST ವ್ಯಾಪ್ತಿಗೆ ಒಳಪಟ್ಟಿರುವ AB-ArK ಯೋಜನೆಗೆ ಒಳಪಟ್ಟಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು SAST ಗುರುತಿಸಿ ಅಂತಹ ವೈದ್ಯಕೀಯ ಸಂಸ್ಥೆಗಳನ್ನು KASS ಯೋಜನೆಯಡಿ ನೋಂದಾಯಿಸಿ ಅಧಿಸೂಚಿಸಲು SAST ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ, ಆಯುಷ್ ಇಲಾಖೆ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಒಳಪಡುವ ಆರೋಗ್ಯ ಕೇಂದ್ರಗಳು, ಆಸ್ಪತ್ರೆಗಳು ಮತ್ತು ಆರೋಗ್ಯ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು, ಶೈಕ್ಷಣಿಕ ಆಸ್ಪತ್ರೆಗಳು ಮತ್ತು ಸರ್ಕಾರದಿಂದ ಹಣಕಾಸಿನ ನೆರವು ಪಡೆಯುತ್ತಿರುವ ಸ್ವಾಯತ್ತ ಸಂಸ್ಥೆಗಳು ಸ್ವಯಂಚಾಲಿತವಾಗಿ (DEEMED) ಈ ಯೋಜನೆಗೆ

ಒಳಪಡುತ್ತವೆ. ಇಂತಹ ಸಂಸ್ಥೆ ಹಾಗೂ ಆಸ್ಪತ್ರೆಗಳನ್ನು ಪ್ರತ್ಯೇಕವಾಗಿ ನೋಂದಾಯಿಸುವ ಅಗತ್ಯವಿರುವುದಿಲ್ಲ. ಇಂತಹ ಎಲ್ಲಾ ಆಸ್ಪತ್ರೆಗಳ ವಿವರವಾದ ಪಟ್ಟಿಯನ್ನು KASS ನ ಜಾಲತಾಣದಲ್ಲಿ ಪ್ರಕಟಿಸಲಾಗುವುದು.

**19. ಈ ಯೋಜನೆಗೆ ಒಳಪಡುವ ನಿರ್ದಿಷ್ಟಪಡಿಸಲಾದ ಚಿಕಿತ್ಸಾ ವಿಧಾನಗಳು ಹಾಗೂ ನಿಗದಿಪಡಿಸಲಾದ ಚಿಕಿತ್ಸಾ ದರಗಳು (Specified Medical Procedures and Prescribed Rates):**

a. 1963 ರ ನಿಯಮಗಳಡಿ ಕೇಂದ್ರದ ಸಿಜಿಎಚ್‌ಎಸ್ ಚಿಕಿತ್ಸಾ ವಿಧಾನಗಳಂತೆ ಹಾಗೂ ದರಗಳಂತೆ ಸರ್ಕಾರಿ ನೌಕರರು ಭರಿಸಿದ ವೈದ್ಯಕೀಯ ವೆಚ್ಚ ಮರುಪಾವತಿ ಸೌಲಭ್ಯ ಪಡೆಯಲು ಅವಕಾಶವಿದೆ. ಇದೀಗ ನೂತನ ಯೋಜನೆಯಡಿ ಸಿಜಿಎಚ್‌ಎಸ್ ಚಿಕಿತ್ಸಾ ವಿಧಾನಗಳು ಹಾಗೂ ದರಗಳೊಂದಿಗೆ AB-ArK ಚಿಕಿತ್ಸಾ ವಿಧಾನಗಳು ಹಾಗೂ ದರಗಳನ್ನು ಒಳಗೊಂಡ ಸಮ್ಮಿಳಿತ KASS ಚಿಕಿತ್ಸಾ ವಿಧಾನಗಳು ಹಾಗೂ ದರಗಳನ್ನು ಒಳಗೊಂಡ ಪಟ್ಟಿಯನ್ನು SAST ಸಿದ್ಧಪಡಿಸಿ ಪ್ರಕಟಿಸತಕ್ಕದ್ದು.

b. ರೋಗ ನಿರ್ಧಾರ ಹಾಗೂ ವೈದ್ಯಕೀಯ ತಪಾಸಣೆ ವಿಧಾನಗಳು ಮತ್ತು ದರಗಳನ್ನು ಕೂಡ ಮೇಲೆ ತಿಳಿಸಿದ ಮಾದರಿಯಲ್ಲಿ SAST ಸಿದ್ಧಪಡಿಸಿ ಪ್ರಕಟಿಸತಕ್ಕದ್ದು.

c. ಹೊರರೋಗಿ ಚಿಕಿತ್ಸಾ ವಿಧಾನಗಳು ಹಾಗೂ ದರಗಳು ಕೂಡ ಈ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾದ ಸಿಜಿಎಚ್‌ಎಸ್ ಮಾದರಿಯಲ್ಲಿರುತ್ತವೆ. ಸಿಜಿಎಚ್‌ಎಸ್ ನಲ್ಲಿ ಒಳಗೊಂಡಿರದ ಹೊರರೋಗಿ ಚಿಕಿತ್ಸಾ ವಿಧಾನಗಳು ಕೂಡ ಈ ಯೋಜನೆಗೆ ಒಳಪಟ್ಟಿರುತ್ತವೆ.

d. ಸಿಜಿಎಚ್‌ಎಸ್ ಅಥವಾ AB-ArK ರಲ್ಲಿ ಒಳಗೊಂಡಿರದ ವಿರಳ, ಹೆಚ್ಚಿನ ಆರ್ಥಿಕ ಪರಿಣಾಮ ಹೊಂದಿರುವ, ಹೊಸ ಚಿಕಿತ್ಸಾ ವಿಧಾನಗಳ ಹಾಗೂ ದರಗಳ ಪ್ರತ್ಯೇಕ ಪಟ್ಟಿಯನ್ನು SAST ಸಿದ್ಧಪಡಿಸಿ ಪ್ರಕಟಿಸತಕ್ಕದ್ದು.

e. KASS ಚಿಕಿತ್ಸಾ ವಿಧಾನಗಳು ಹಾಗೂ ದರಗಳ ಪರಿಷ್ಕರಣೆಗೆ ಹಾಗೂ ಹೊಸ ಚಿಕಿತ್ಸಾ ವಿಧಾನಗಳನ್ನು ಹಾಗೂ ದರಗಳನ್ನು ನಿರ್ಧರಿಸುವ ಸಂದರ್ಭದಲ್ಲಿ ಸರ್ಕಾರದ ಅನುಮೋದನೆಯನ್ನು ಅಗತ್ಯಪಡಿಸಲಾಗಿದೆ.

f. ಯೋಜನೆಯಲ್ಲಿ ನಿಗದಿಪಡಿಸಲಾದ ಒಳರೋಗಿ ಹಾಗೂ ಹೊರರೋಗಿ ಚಿಕಿತ್ಸಾ ವಿಧಾನಗಳು ಪ್ಯಾಕೇಜ್ ದರಗಳಲ್ಲಿ ಇರುತ್ತವೆ. ಈ ಯೋಜನೆಯಡಿ ಒಳಗೊಂಡಿರುವ ಪ್ರತಿಯೊಂದು ಚಿಕಿತ್ಸಾ ವಿಧಾನದಲ್ಲಿ ನಿಗದಿ ಪಡಿಸಲಾದ ಗರಿಷ್ಠ ಪ್ಯಾಕೇಜ್ ದರಗಳಿಗೆ ಒಳಪಟ್ಟು ಸರ್ಕಾರಿ ನೌಕರ ಹಾಗೂ ಅವರ ಕುಟುಂಬದ ಸದಸ್ಯರು ಯೋಜನೆಯ ವ್ಯಾಪ್ತಿಗೆ ಒಳಪಟ್ಟ ಯಾವುದೇ ನೋಂದಾಯಿತ ವೈದ್ಯಕೀಯ ಸಂಸ್ಥೆಗಳಲ್ಲಿ, ಗರಿಷ್ಠ ಹೊರಮಿತಿ ಇಲ್ಲದೇ ಸಂದರ್ಭಾನುಸಾರ ನಗದು ರಹಿತವಾಗಿ ವೈದ್ಯಕೀಯ ಚಿಕಿತ್ಸೆ ಪಡೆಯಲು ಅಥವಾ ಮರುಪಾವತಿ ಮಾಡಿಕೊಳ್ಳಲು ಅರ್ಹರಿರುತ್ತಾರೆ.

g. **ಸಾರ್ವಜನಿಕ ವಲಯದ ವೈದ್ಯಕೀಯ ಸಂಸ್ಥೆಗಳಲ್ಲಿ ಚಿಕಿತ್ಸಾ ದರಗಳು:** ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ಹೊರರೋಗಿ ಹಾಗೂ ಒಳರೋಗಿ ವೈದ್ಯಕೀಯ ಚಿಕಿತ್ಸೆಗಳನ್ನು ಉಚಿತವಾಗಿ ಪಡೆಯಬಹುದಾಗಿದೆ. ಆದರೆ ಕೆಲವು

ಸಾರ್ವಜನಿಕ ವಲಯದ ವೈದ್ಯಕೀಯ ಸಂಸ್ಥೆಗಳಲ್ಲಿ (ಉದಾ: ಸ್ವಾಯತ್ತ ಸಂಸ್ಥೆಗಳು) ಪಾವತಿ ಆಧಾರದ ಮೇಲೆ ಸೇವೆಯನ್ನು ಪಡೆಯಬೇಕಾದ ಸಂದರ್ಭಗಳಲ್ಲಿ ಅಂತಹ ಸಂಸ್ಥೆಗಳಿಗೆ KASS ಯೋಜನೆಯಂತೆ SAST ಮುಖಾಂತರ ಪಾವತಿ ಮಾಡಲಾಗುವುದು. **ಸಾರ್ವಜನಿಕ ವಲಯದ ವೈದ್ಯಕೀಯ ಸಂಸ್ಥೆಗಳ** ಪ್ರತ್ಯೇಕ ಪಟ್ಟಿಯನ್ನು ಮಾಡಲಾಗುವುದು. ಅಂದರೆ ಇಂತಹ ಸಂಸ್ಥೆಗಳಲ್ಲಿ ಕೂಡ ಸಂದರ್ಭಾನುಸಾರ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಲಭ್ಯವಿರುತ್ತದೆ.

h. **ಪ್ಯಾಕೇಜ್ ದರಗಳಲ್ಲಿ ಶಸ್ತ್ರ ಚಿಕಿತ್ಸಾ ಪ್ಯಾಕೇಜ್ (Surgical Package) ಹಾಗೂ Medical Package ಗಳು ಒಳಗೊಂಡಿರುತ್ತವೆ**:

ಪ್ಯಾಕೇಜ್ ದರದಲ್ಲಿ ಒಳಗೊಂಡ ಅಂಶಗಳ ಬಗ್ಗೆ ಪ್ರತ್ಯೇಕ ಸೂಚನೆಗಳನ್ನು ನೀಡಲಾಗುವುದು.

**20] ಈ ಯೋಜನೆಯಡಿ ಚಿಕಿತ್ಸೆಗೆ ಅವಕಾಶವಿಲ್ಲದಿರುವ ಪ್ರಕರಣಗಳು: (List of inadmissible treatments):**

ಈ ಯೋಜನೆಯಡಿ ಅವಕಾಶವಿಲ್ಲದ ಚಿಕಿತ್ಸೆಗಳಿಗೆ ಮಾರ್ಗದರ್ಶಿ ತತ್ವಗಳನ್ನು ಪಟ್ಟಿ ಮಾಡಲಾಗಿದೆ. ಅನುಮತಿಸದ ಪ್ರತಿಯೊಂದು ಪ್ರಕರಣವನ್ನು ಅರ್ಹತೆಯ ಆಧಾರದ ಮೇಲೆ ಕನಿಷ್ಠ ಎರಡು ಹಂತಗಳಲ್ಲಿ ನಿರ್ಣಯಿಸಲಾಗುತ್ತದೆ. ಈ ಕೆಳಗಿನ ಸಂದರ್ಭಗಳಲ್ಲಿ ನಗದುರಹಿತ ಸೇವೆಗಳನ್ನು ಅಥವಾ ಮರುಪಾವತಿಯನ್ನು ಒದಗಿಸಲಾಗುವುದಿಲ್ಲ.

1. ಯಾವುದೇ ಚಿಕಿತ್ಸೆ ಒಳಗೊಂಡಿರದ ಶುಶ್ರೂಷಾ ಸೇವೆ. (Nursing care without active treatment)

2. ಕೆಲವು ಸಂದರ್ಭಗಳನ್ನು ಹೊರತುಪಡಿಸಿ ಸುರೂಪಿ ಚಿಕಿತ್ಸಾ ವಿಧಾನಗಳು (Cosmetic procedures other than which are a part of treatment (due to accident, burns or as a part of any illness) or listed in KASS rate list.)

3. ಆಹಾರ ತಜ್ಞ, ಸಲಹೆಗಾರರು ಮತ್ತು ಭೌತಚಿಕಿತ್ಸಕ ಇವರ ಸಮಾಲೋಚನಾ ಶುಲ್ಕಗಳು. (Consultation charges for Dieticians, Counselors, Physiotherapists)

4. ಲಸಿಕೆ - Vaccination except universal vaccination programs and specified under KASS

5. ಯಾವುದೇ ರೀತಿಯ ಸುರೂಪಿ ಅಥವಾ ಸೌಂದರ್ಯವರ್ಧಕ ಚಿಕಿತ್ಸೆ Cosmetic or aesthetic treatment (Lasik procedure for power correction, Liposuction for obesity etc.) of any description,

6. ಸಾಮಾನ್ಯ ದೌರ್ಬಲ್ಯತೆ -Convalescence, general debility, Run-down condition.

7. MoH&FW (Ministry of Health and Family Welfare) ಅಥವಾ FDA (Food and Drug Administration)ಗಳ ಸಕ್ಷಮ ಪ್ರಾಧಿಕಾರ 'ಚಿಕಿತ್ಸೆ' ಎಂದು ಅನುಮೋದಿಸಿರದ ಯಾವುದೇ ಚಿಕಿತ್ಸಾ ವಿಧಾನಗಳು.

Any Procedures not approved as a treatment by competent authority of MoH&FW or FDA

8. ಪ್ರಾಯೋಗಿಕ ಚಿಕಿತ್ಸೆಗಳು (Experimental treatments)
9. ಮಿದುಳು ನಿಷ್ಕ್ರಿಯಗೊಂಡ ನಂತರದ ಚಿಕಿತ್ಸೆ (Treatment after brain dead)
10. ವಿದೇಶಗಳಲ್ಲಿ ಪಡೆದ ಚಿಕಿತ್ಸೆಗಳ ವೆಚ್ಚ.

**21. ಒಳರೋಗಿ ವೈದ್ಯಕೀಯ ಚಿಕಿತ್ಸೆ:** ಯೋಜನೆಯಡಿ ನೊಂದಾಯಿಸಲಾಗಿರುವ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಒಳರೋಗಿ ಚಿಕಿತ್ಸೆಗಳು ನಗದು ರಹಿತವಾಗಿರುತ್ತವೆ. ಸರ್ಕಾರಿ ನೌಕರ ಹಾಗೂ ಆತನ ಕುಟುಂಬದ ಸದಸ್ಯರು ಯಾವುದೇ ಉಲ್ಲೇಖ (Referral) ಇಲ್ಲದೇ ಯಾವುದೇ ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ನಗದು ರಹಿತ ಚಿಕಿತ್ಸಾ ಸೌಲಭ್ಯಗಳನ್ನು ಪಡೆಯಬಹುದಾಗಿದೆ. ರೋಗಿಯು ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆಗೆ ಒಳಪಡುವ ಸಂದರ್ಭದಲ್ಲಿ ಪೂರ್ವ ಮಂಜೂರಾತಿ (Pre-authorization)ಯನ್ನು ವಿಳಂಬವಿಲ್ಲದೇ ನೀಡಲಾಗುವುದು.

ಮುಂದುವರೆದು, ಒಳರೋಗಿ ಪ್ರಕರಣಗಳಲ್ಲಿ ಔಷಧೋಪಚಾರವು ಪ್ಯಾಕೇಜುಗಳಲ್ಲಿ ಒಳಗೊಂಡಂತೆ ಸೀಮಿತವಾಗಿ ಇರುತ್ತದೆ. ಇಂತಹ ಪ್ರಕರಣಗಳಲ್ಲಿ ಮುಂದುವರೆದ ಚಿಕಿತ್ಸೆಯನ್ನು ಹೊರರೋಗಿಯಾಗಿ ಪಡೆಯಬಹುದಾಗಿದೆ.

**22. ಹೊರರೋಗಿ ವೈದ್ಯಕೀಯ ಚಿಕಿತ್ಸೆ:**

**ನೊಂದಾವಣೆ, ವೈದ್ಯರ ಸಮಾಲೋಚನಾ ಶುಲ್ಕ, ರೋಗ ನಿರ್ಧಾರ ವಿಧಾನಗಳು, ಔಷಧಿಗಳು:**

**(Out Patient Treatment: Registration, Doctor Consultation fees, Diagnosis, Medicines)**

ಪ್ರಸ್ತುತ ಜಾರಿಯಲ್ಲಿರುವ ವ್ಯವಸ್ಥೆಯಂತೆ ಹೊರರೋಗಿ ಚಿಕಿತ್ಸಾ ವೆಚ್ಚ ಮರುಪಾವತಿ ಪಡೆಯಲು ನಿರ್ದಿಷ್ಟಪಡಿಸಿರುವ ಹಾಗೂ ವೈದ್ಯರ ಸಲಹೆಯಂತೆ ನಿರಂತರ ಔಷಧೋಪಚಾರ ಅಗತ್ಯವಿರುವ ಸರ್ಕಾರದಿಂದ ನಿರ್ದಿಷ್ಟವಾಗಿ ಗುರುತಿಸಲಾಗಿರುವ 19 ದೀರ್ಘಕಾಲಿಕ ಖಾಯಿಲೆಗಳಿಗೆ ಹಾಗೂ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸುವ ಇತರೆ ಖಾಯಿಲೆಗಳ ಸಂಬಂಧ ಸರ್ಕಾರಿ ನೌಕರ ಸ್ವಂತಕ್ಕೆ ಹಾಗೂ ಅವಲಂಬಿತ ಕುಟುಂಬದ ಸದಸ್ಯರ ಚಿಕಿತ್ಸೆಗೆ ನೊಂದಾಯಿತ ಖಾಸಗಿ ವೈದ್ಯಕೀಯ ಸಂಸ್ಥೆಯಲ್ಲಿ ಹಾಗೂ ಸರ್ಕಾರಿ ವೈದ್ಯಕೀಯ ಸಂಸ್ಥೆಯಲ್ಲಿ ಪಡೆದ ಹೊರರೋಗಿ ಚಿಕಿತ್ಸೆಗೆ ಸಂಬಂಧಿಸಿದಂತೆ ವೈದ್ಯರ ಸಮಾಲೋಚನಾ ಶುಲ್ಕ, ವೈದ್ಯಕೀಯ ತಪಾಸಣೆಗಳಿಗಾಗಿ ಹಾಗೂ ಔಷಧೋಪಚಾರಕ್ಕಾಗಿ ಭರಿಸಲಾದ ವೆಚ್ಚವನ್ನು ಸಂಬಂಧಪಟ್ಟ ಸರ್ಕಾರಿ ನೌಕರರ ನಿಯಂತ್ರಣಾಧಿಕಾರಿಗಳು 1963ರ ನಿಯಮಗಳಲ್ಲಿನ ಅವಕಾಶಗಳಂತೆ ಸರ್ಕಾರಿ ನೌಕರನಿಗೆ ಹಿಂಬರಿಸಲು ಅವಕಾಶವಿದೆ. ಸರ್ಕಾರಿ ವೈದ್ಯಕೀಯ ಸಂಸ್ಥೆಯ ವೈದ್ಯರ ಶಿಫಾರಸ್ಸಿನಂತೆ ಕೈಗೊಳ್ಳಲಾದ ವೈದ್ಯಕೀಯ ತಪಾಸಣೆ ಹಾಗೂ ಔಷಧೋಪಚಾರ ವೆಚ್ಚದ ಮರುಪಾವತಿಗೆ ಕೂಡ ಅವಕಾಶವಿದೆ.

ಸಿಜಿಎಚ್ಎಸ್ ವೈದ್ಯಕೀಯ ಚಿಕಿತ್ಸಾ ವಿಧಾನಗಳಲ್ಲಿ ಹೊರರೋಗಿ ಚಿಕಿತ್ಸೆಗಳು ಕೂಡ ಒಳಗೊಂಡಿರುತ್ತವೆ. ಹೀಗೆ ಸಿಜಿಎಚ್ಎಸ್ ಯೋಜನೆಯಡಿ ಗುರುತಿಸಲಾಗಿರುವ

(CGHS Listed OPD Procedures) ಹೊರರೋಗಿ ಚಿಕಿತ್ಸೆಗಳು ಸೇರಿದಂತೆ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ಈ ಯೋಜನೆಯಡಿ ನೊಂದಾಯಿಸ್ಪಟ್ಟಿರುವ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಪಡೆಯುವ **ಇತರೆ ಯಾವುದೇ** ಹೊರರೋಗಿ ಚಿಕಿತ್ಸೆಯಲ್ಲಿ- ನೊಂದಾವಣೆ ಶುಲ್ಕ, ವೈದ್ಯರ ಸಮಾಲೋಚನಾ ಶುಲ್ಕ, ವೈದ್ಯರ ಶಿಫಾರಸ್ಸಿನ ಮೇರೆಗೆ ನಡೆಸಲಾಗುವ ರೋಗ ನಿರ್ಧಾರ ವಿಧಾನಗಳು (Investigation/Diagnosis/Imaging) ಒಳಗೊಂಡಿರುತ್ತವೆ ಹಾಗೂ ಇವು ನಗದುರಹಿತವಾಗಿರುತ್ತವೆ. ಆದರೆ ಯಾವುದೇ ಹೊರರೋಗಿ ಚಿಕಿತ್ಸೆಗೆ ಭರಿಸುವ ಔಷಧೋಪಚಾರವು ನಗದು ರಹಿತವಾಗಿರುವುದಿಲ್ಲ. ಔಷಧೋಪಚಾರಕ್ಕಾಗಿ ಸರ್ಕಾರಿ ನೌಕರನು ಭರಿಸಿದ ವೆಚ್ಚವನ್ನು ಪ್ರಸ್ತುತ ಅನುಸರಿಸಲಾಗುತ್ತಿರುವ ಕ್ರಮದಲ್ಲಿ ಸಂಬಂಧಪಟ್ಟ ನೌಕರರ ನಿಯಂತ್ರಣಾಧಿಕಾರಿಗಳು ಸರ್ಕಾರಿ ನೌಕರರಿಗೆ ಹಿಂಬರಿಸುವುದು.

**23.** ಪ್ರಸ್ತುತ 1963 ನಿಯಮಗಳಡಿ ನೀಡಲಾಗುತ್ತಿರುವ ಕನ್ನಡಕ, ಶ್ರವಣ ಸಾಧನ, ಕೃತಕ ವೈದ್ಯಕೀಯ ಸಾಧನ ಮುಂತಾದ ಸೌಲಭ್ಯಗಳಿಗೆ ಭರಿಸಲಾದ ವೆಚ್ಚವನ್ನು ನಿಯಮಾನುಸಾರ ಹಿಂಬರಿಸಲಾಗುವುದು.

**24. ವಾರ್ಷಿಕ ವೈದ್ಯಕೀಯ ತಪಾಸಣೆ (Annual Health Checkup) :** 40 ವರ್ಷ ಮೀರಿದ ಸರ್ಕಾರಿ ನೌಕರರು ಮಾತ್ರ ಐಚ್ಛಿಕವಾಗಿ ಕ್ಯಾಲೆಂಡರ್ ವರ್ಷದಲ್ಲಿ ಒಂದು ಬಾರಿ ಸರ್ಕಾರ ನಿಗದಿಪಡಿಸುವ ಮಿತಿಯಲ್ಲಿ ಕೆಲವು ಸಾಮಾನ್ಯ ವೈದ್ಯಕೀಯ ತಪಾಸಣೆಗಳನ್ನು ಕೈಗೊಳ್ಳಬಹುದು, ಈ ತಪಾಸಣೆಗಳು ಸರ್ಕಾರಿ ವೈದ್ಯಕೀಯ ಸಂಸ್ಥೆಗಳಲ್ಲಿ ಉಚಿತವಾಗಿರುತ್ತವೆ. ಸರ್ಕಾರಿ ಸಂಸ್ಥೆಗಳಲ್ಲಿ ಅಂತಹ ತಪಾಸಣಾ ಸೌಲಭ್ಯಗಳು ಲಭ್ಯವಿಲ್ಲದಿದ್ದಲ್ಲಿ ಅಧಿಸೂಚಿತ ಖಾಸಗಿ ವೈದ್ಯಕೀಯ ಸಂಸ್ಥೆಗಳಲ್ಲಿ ಅಂತಹ ತಪಾಸಣೆಗಳನ್ನು ಕೈಗೊಂಡಲ್ಲಿ ಅಂತಹ ವೆಚ್ಚವನ್ನು ಮರು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಪ್ರತ್ಯೇಕ ಸೂಚನೆಗಳನ್ನು ನೀಡಲಾಗುವುದು.

**25. ವೈದ್ಯಕೀಯ ವೆಚ್ಚದ ಮರುಪಾವತಿ ಪ್ರಕರಣಗಳು:**

ಈ ಯೋಜನೆಯು ನಗದು ರಹಿತ ಹಾಗೂ ವೈದ್ಯಕೀಯ ವೆಚ್ಚದ ಮರುಪಾವತಿ ಎರಡೂ ಅಂಶಗಳನ್ನು ಒಳಗೊಂಡಿರುತ್ತದೆ.

1. **ಈ ಕೆಳಕಂಡ ತುರ್ತು ಸಂದರ್ಭಗಳಲ್ಲಿ ಸರ್ಕಾರಿ ನೌಕರ ಅಥವಾ ಆತನ ಕುಟುಂಬದ ಸದಸ್ಯರು ನೊಂದಾಯಿಸಲ್ಪಡದ ವೈದ್ಯಕೀಯ ಸಂಸ್ಥೆಗಳಲ್ಲಿ (Non empanelled Health Institutions) ಪಡೆದ ವೈದ್ಯಕೀಯ ಚಿಕಿತ್ಸಾ ವೆಚ್ಚವನ್ನು** 1963 ರ ನಿಯಮಗಳಡಿ ಮರುಪಾವತಿ ಮಾಡಿಕೊಳ್ಳಲು ಅವಕಾಶವಿರುತ್ತದೆ:

   i. ಸರ್ಕಾರಿ ನೌಕರರು ಅಥವಾ ಅವರ ಕುಟುಂಬ ಸದಸ್ಯರು ಅಪಘಾತಕ್ಕೀಡಾಗಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗ, ಸಾರ್ವಜನಿಕರು ಅಥವಾ ಸ್ನೇಹಿತರು ತುರ್ತು ಚಿಕಿತ್ಸೆಗಾಗಿ ಹತ್ತಿರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಸೇರಿಸಿದ ಸಂದರ್ಭ;

   ii. ಹಠಾತ್ತಾಗಿ ಅಕಾಲದಲ್ಲಿ ಹೆರಿಗೆ ನೋವು ಕಾಣಿಸಿಕೊಂಡು ಹತ್ತಿರದಲ್ಲಿ ಯಾವುದೇ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳು

ಇಲ್ಲದಿದ್ದ ಸಂದರ್ಭದಲ್ಲಿ ಕುಟುಂಬದ ಸದಸ್ಯರು ತುರ್ತು ಚಿಕಿತ್ಸೆಗಾಗಿ ಹತ್ತಿರದ ಖಾಸಗಿ ಆಸ್ಪತ್ರೆಯಲ್ಲಿ ಸೇರಿಸಿದ ಸಂದರ್ಭ;

iii. ಹೃದಯಾಘಾತಕ್ಕೀಡಾಗಿ ತುರ್ತು ಚಿಕಿತ್ಸೆಯ ಅಗತ್ಯವಿದ್ದು, ಹತ್ತಿರದಲ್ಲಿ ಯಾವುದೇ ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳು ಇಲ್ಲದಿದ್ದ ಸಂದರ್ಭದಲ್ಲಿ ತುರ್ತು ಚಿಕಿತ್ಸೆಗಾಗಿ ಹತ್ತಿರದ ಖಾಸಗಿ ಆಸ್ಪತ್ರೆಯಲ್ಲಿ ಸೇರಿದ ಸಂದರ್ಭ;

iv. ಬೆಂಕಿ ಅಪಘಾತಕ್ಕೀಡಾಗಿ ತುರ್ತು ಚಿಕಿತ್ಸೆಯ ಅಗತ್ಯವಿರುವ ಸಂದರ್ಭದಲ್ಲಿ ಹತ್ತಿರದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಿದ ಸಂದರ್ಭ;

v. ಸರ್ಕಾರಿ ನೌಕರರ ಅಥವಾ ಅವರ ಕುಟುಂಬದ ಸದಸ್ಯರಿಗೆ ಜೀವಾಪಾಯವಿದ್ದು, ಸರ್ಕಾರಿ ವೈದ್ಯರ ಅಥವಾ ಮಾನ್ಯತೆ ಪಡೆದ ಆಸ್ಪತ್ರೆಯ ವೈದ್ಯರ ಸಲಹೆಯ ಮೇರೆಗೆ ತುರ್ತು ಚಿಕಿತ್ಸೆಯ ಅಗತ್ಯವಿರುವ ಬೇರೆ ಯಾವುದೇ ಅತಿ ವಿರಳ ಸಂದರ್ಭ; ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಚಿಕಿತ್ಸೆಯು ಲಭ್ಯವಿಲ್ಲದಂತಹ ವಿಶೇಷ ಸಂದರ್ಭಗಳಲ್ಲಿ ಈ ಆಸ್ಪತೆಗಳ ಸಕ್ಷಮ ಆಸ್ಪತ್ರೆ ಪ್ರಾಧಿಕಾರದ ಶಿಫಾರಸ್ಸಿನ ಮೇರೆಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸಂದರ್ಭ

ಈ ಯೋಜನೆಯಡಿ ಅನ್ಯಥಾ ನಿರ್ದಿಷ್ಟಪಡಿಸಿದ ಸಂದರ್ಭಗಳನ್ನು ಹೊರತುಪಡಿಸಿ ಯಾವುದೇ ಪ್ರಕರಣದಲ್ಲಿ ಸಂಪೂರ್ಣ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅವಕಾಶವಿರುವುದಿಲ್ಲ.

2. **ಈ ಕೆಳಕಂಡ ಸಂಭರ್ಭಗಳಲ್ಲಿ KASS ಯೋಜನೆ ಅಡಿ ನೊಂದಾಯಿತ ವೈದ್ಯಕೀಯ ಸಂಸ್ಥೆಯಲ್ಲಿ ಪಡೆದ (ದಾಖಲಾದ ಮತ್ತು ಪೂರ್ವ ಪ್ರಾಧಿಕಾರವಾದ ನಂತರ only after admission and Pre-authorisation) ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು KASS ದರಗಳನ್ವಯ SAST ನಿಂದ ಮರುಪಾವತಿಸಲಾಗುವುದು:**

i. ಈ ಯೋಜನೆಯಡಿ ರೋಗಿಯನ್ನು ದಾಖಲಿಸಿದ ನಂತರದಲ್ಲಿ ಕೆಲವೊಂದು ಕಾರಣಗಳಿಗಾಗಿ (ಆಸ್ಪತ್ರೆಯು ದಾಖಲಿಸಬೇಕು) ವೆಚ್ಚವನ್ನು ಭರಿಸಲು ರೋಗಿಗೆ ತಿಳಿಸಿದ ಸಂದರ್ಭ.

ಉದಾ: ತಾಂತ್ರಿಕ ಕಾರಣಗಳಿಗಾಗಿ – Server Down, ಸಂಪರ್ಕದ ತೊಂದರೆ (Connectivity not established), ಅಪೂರ್ಣವಾದ ದಾಖಲಾತಿಗಳ uploading.

ii. Stepping up, stepping down ಅಥವಾ ಚಿಕಿತ್ಸೆಯ ವಿಧಾನದ ಬದಲಾವಣೆಯ ತುರ್ತು ಸಂದರ್ಭಗಳಲ್ಲಿ ರೋಗಿಯು ವೆಚ್ಚವನ್ನು ಭರಿಸಬೇಕಾದ ಸಂದರ್ಭ.

Preauth ಅಥವಾ ವಿಳಂಬದ ಅನುಮೋದನೆ ಸಂದರ್ಭಗಳಲ್ಲಿ ರೋಗಿಯು ಭರಿಸಿರುವ ವೆಚ್ಚ.

iii. ತುರ್ತು ಚಿಕಿತ್ಸಾ ಸಂದರ್ಭಗಳಲ್ಲಿ (Emergency & Code available) ತಕ್ಷಣದ ದಾಖಲಾತಿ ಅಥವಾ ತುರ್ತು ಚಿಕಿತ್ಸೆ ಅಗತ್ಯವಾಗಿದ್ದು ರೋಗಿಯು ವೆಚ್ಚವನ್ನು ಭರಿಸಿದ ಸಂದರ್ಭ (ಆದಾಗ್ಯೂ ರೋಗಿಯು ಬಿಡುಗಡೆ (discharge)

ಹೊಂದುವ ಮುಂಚಿತವಾಗಿ ಆಸ್ಪತ್ರೆಯು ಸದರಿ ಮೊತ್ತವನ್ನು ಮರುಪಾವತಿಸಬೇಕು)

iv. ಚಿಕಿತ್ಸಾ ತಜ್ಞತೆ (expertise) ಅಥವಾ ಚಿಕಿತ್ಸಾ ಸಲಕರಣೆ (medical equipment) ಲಭ್ಯವಿಲ್ಲದ ಸಂದರ್ಭದಲ್ಲಿ ರೋಗಿಯನ್ನು ಮತ್ತೊಂದು ಆಸ್ಪತ್ರೆಗೆ ವರ್ಗಾಯಿಸಬೇಕಾದ ಸಂದರ್ಭದಲ್ಲಿ ರೋಗಿಯು ವೆಚ್ಚವನ್ನು ಪಾವತಿಸುವಂತೆ ನಿರ್ಬಂಧಿಸಿದ ಸಂದರ್ಭ.

v. ಮೃತದೇಹವನ್ನು ಪಡೆಯವಲ್ಲಿ ವೈದ್ಯಕೀಯ ವೆಚ್ಚವನ್ನು ಇತ್ಯರ್ಥಗೊಳಿಸಲು ತಿಳಿಸಿದ ಸಂದರ್ಭ.

vi. ಆಸ್ಪತ್ರೆಯಲ್ಲಿ ದಾಖಲಿಸುವ ಸಂದರ್ಭದಲ್ಲಿ ಯಾವುದೇ ಚಿಕಿತ್ಸಾ ವಿಧಾನಗಳಿಗೆ ಅಥವಾ ವೈದ್ಯಕೀಯ ತಪಾಸಣೆಗೆ ಇನ್ನೊಂದು ಕ್ಲಿನಿಕ್ ಅಥವಾ ತಪಾಸಣಾ ಕೇಂದ್ರಕ್ಕೆ (Diagnostic Centre) ಶಿಫಾರಸ್ಸು ಮಾಡಿ ಅದಕ್ಕೆ ವೆಚ್ಚ ಪಾವತಿಸಲು ತಿಳಿಸಿದ ಸಂದರ್ಭ.

vii. ರಸ್ತೆ ಅಪಘಾತ ಸಂದರ್ಭಗಳಂತಹ ತುರ್ತು ಸಂದರ್ಭಗಳಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ರೋಗಿಯನ್ನು ಸಾರ್ವಜನಿಕರು / ಅಪರಿಚಿತರು ಆಸ್ಪತ್ರೆಗೆ ಸೇರಿಸಿ ಪ್ರಾರಂಭಿಕ ಚಿಕಿತ್ಸೆಗೆ (Preliminary treatment) ಪಾವತಿಸಿದ ವೆಚ್ಚ.

viii. ಉಪಶಾಮಕ ಆರೈಕೆಗೆ (Palliative Care) ಉದಾ: ಮಾರಣಾಂತಿಕ ಕಾಯಿಲೆಗಳು, ಇನ್ನೊಂದು ಆಸ್ಪತ್ರೆಗೆ ಶಿಫಾರಸ್ಸು ಮಾಡಿದ ಸಂದರ್ಭದಲ್ಲಿ ಪಾವತಿಸಿದ ವೆಚ್ಚ.

ix. ದಾಖಲಾತಿಯ ಸಂದರ್ಭದಲ್ಲಿ ಔಷಧಗಳನ್ನು ಔಷಧಾಲಯಗಳಲ್ಲಿ ಖರೀದಿಸಿದ ಸಂದರ್ಭ

x. ನೋಂದಾಯಿತ ವೈದ್ಯರು ಸೂಚಿಸಿದ implant ಅಥವಾ ವೈದ್ಯಕೀಯ ಸಾಧನಕ್ಕೆ (device/appliance) ಪಾವತಿಸಿದ ವೆಚ್ಚ.

xi. ದೀರ್ಘಕಾಲಾವಧಿಗೆ ಆಸ್ಪತ್ರೆಯಲ್ಲಿ ದಾಖಲಾತಿ ಹೊಂದಿದ ಸಂದರ್ಭದಲ್ಲಿ (ತಲೆಗೆ ಏಟು, ಕೋಮ (Coma), Septicaemia, MODS) ಹಾಗೂ ರೋಗಿಯು ಚಿಕಿತ್ಸೆಗೆ ವೆಚ್ಚ ಭರಿಸಿದ ಸಂದರ್ಭ.

xii. ರೋಗಿಯ ಇಚ್ಛೆಯಿಲ್ಲದೆ ಅವನ ಅರ್ಹತೆಯ ವಾರ್ಡಿಗಿಂತ ಹೆಚ್ಚಿನ ವಾರ್ಡ್‌ನಲ್ಲಿ (ಅರ್ಹತೆಯ ವಾರ್ಡ್ ಲಭ್ಯವಿಲ್ಲದ ಸಂದರ್ಭ) ಚಿಕಿತ್ಸೆ ಪಡೆದ ಸಂದರ್ಭ ಅಥವಾ ಇಂತಹ ಸಂದರ್ಭಗಳಲ್ಲಿ ಆಸ್ಪತ್ರೆಯು ವಿಧಿಸಿದ ದರವನ್ನು ಆಸ್ಪತ್ರೆಯ ಕ್ಲೇಮುಗಳಿಂದ ಕಳೆದು, ರೋಗಿಗೆ ಪಾವತಿಸಲಾಗುತ್ತದೆ.

xiii. ತುರ್ತು ಸಂದರ್ಭದಲ್ಲಿ KASS ಕಾರ್ಡ್ ಅನ್ನು ಒದಗಿಸದೆ ಚಿಕಿತ್ಸೆಯನ್ನು ಪಡೆದು, ವೆಚ್ಚವನ್ನು ಭರಿಸಿದ ಸಂದರ್ಭ

**26. ಹೊರರಾಜ್ಯದಲ್ಲಿ ಸ್ಥಾಪಿತವಾಗಿರುವ ರಾಜ್ಯ ಸರ್ಕಾರಕ್ಕೆ ಸೇರಿದ ಕಚೇರಿಯ ನೌಕರರ ವೈದ್ಯಕೀಯ ಚಿಕಿತ್ಸೆ:** (ಉದಾ: ನವದೆಹಲಿಯಲ್ಲಿರುವ ನಿವಾಸಿ ಆಯುಕ್ತರ ಕಚೇರಿ, ಕರ್ನಾಟಕ ಭವನ, ವಾರ್ತಾ ಕೇಂದ್ರ) ಇಂತಹ ನೌಕರರು ಕೇಂದ್ರ ಕಚೇರಿ ಇರುವಲ್ಲಿ ಪಡೆದ ವೈದ್ಯಕೀಯ ವೆಚ್ಚ ಮರುಪಾವತಿಯನ್ನು 1963 ನಿಯಮಗಳಂತೆ ಕೈಗೊಳ್ಳಲಾಗುವುದು. ಆದರೆ ಅವರ ಕುಟುಂಬದ ಸದಸ್ಯರು ರಾಜ್ಯದಲ್ಲಿ ವಾಸವಾಗಿದ್ದಲ್ಲಿ

ಹಾಗೂ ನೌಕರ ಈ ಯೋಜನೆಯಡಿಯಲ್ಲಿ ನೋಂದಾಯಿಸಲ್ಪಟ್ಟಿದ್ದಲ್ಲಿ ಅಂತಹ ನೌಕರನಿಗೆ ಹಾಗೂ ಆತನ ಕುಟುಂಬದ ಸದಸ್ಯರಿಗೆ ಈ ಯೋಜನೆಯ ಸೌಲಭ್ಯವನ್ನು ವಿಸ್ತರಿಸಲಾಗುವುದು.

**27. ಯೋಜನೆಯ ಕಾರ್ಯ ನಿರ್ವಹಣೆ: Work flow of Scheme:** ಈ ಯೋಜನೆಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಡುವ SAST ಮುಖಾಂತರ ಜಾರಿಗೊಳಿಸಲಾಗುವುದು. ಈ ಯೋಜನೆಯ ಕಾರ್ಯನಿರ್ವಹಣೆಯು ಬಹುತೇಕ ಮಾಹಿತಿ ತಂತ್ರಜ್ಞಾನ ಆಧಾರಿತವಾಗಿರುತ್ತದೆ (Online). ಅಂದರೆ ಯೋಜನೆಗೆ ಸರ್ಕಾರಿ ನೌಕರರು ನೊಂದಾಯಿಸಿಕೊಳ್ಳುವುದು (Enrolment), ಖಾಸಗಿ ವೈದ್ಯಕೀಯ ಸಂಸ್ಥೆಗಳು ನೊಂದಾವಣೆಗೆ ಅರ್ಜಿ ಸಲ್ಲಿಸುವುದು, ಅವುಗಳೊಂದಿಗೆ ವ್ಯವಹಾರ, ಪ್ರಿ -ಆಥರೈಸೇಷನ್, ಖಾಸಗಿ ಆಸ್ಪತ್ರೆಗಳು ಕ್ಲೇಮು ಸಲ್ಲಿಸುವುದು, ಕ್ಲೇಮುಗಳನ್ನು ಇತ್ಯರ್ಥಪಡಿಸುವುದು, ಇತ್ಯಾದಿ.

ಈ ಉದ್ದೇಶಕ್ಕಾಗಿ SAST ಸಂಸ್ಥೆಯಲ್ಲಿ ಈಗಾಗಲೇ ಲಭ್ಯವಿರುವ ತಂತ್ರಜ್ಞಾನವನ್ನು ಬಳಸಿಕೊಂಡು ಯೋಜನೆಯ ಜಾರಿಗೆ ಅತ್ಯವಶ್ಯವಿರುವ ತಂತ್ರಜ್ಞಾನವನ್ನು SAST ಸಂಸ್ಥೆಯು ಅಭಿವೃದ್ಧಿ ಪಡಿಸಲು ಕ್ರಮವಹಿಸತಕ್ಕದ್ದು. ಮುಂದುರವರೆದು ಸರ್ಕಾರದೊಂದಿಗೆ ಇ-ಆಫೀಸ್ ಮಾದರಿಯಲ್ಲಿ ವ್ಯವಹರಿಸಲು ಕೂಡ ಅಗತ್ಯ ತಂತ್ರಜ್ಞಾನವನ್ನು SAST ಸಂಸ್ಥೆಯು ಅಭಿವೃದ್ಧಿಪಡಿಸುವುದು.

**28. KASS ಯೋಜನೆಗೆ ಸರ್ಕಾರಿ ನೌಕರರ ವಂತಿಕೆ: (Contribution from Government Employees)**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಈ ಯೋಜನೆಗೆ ರಾಜ್ಯ ಸರ್ಕಾರಿ ನೌಕರರ ಮಾಸಿಕ ವಂತಿಕೆಯನ್ನು ನೀಡಲು ಸರ್ಕಾರದ ಮುಂದೆ ಪ್ರಸ್ತಾಪಿಸಿರುತ್ತದೆ. ಈ ಅಂಶವನ್ನು ಪರಿಗಣಿಸಿ ಈ ಯೋಜನೆಗೆ ಒಳಪಡಲಿರುವ ಎಲ್ಲ ಗುಂಪುಗಳ ಸರ್ಕಾರಿ ನೌಕರರ ಮಾಸಿಕ ವಂತಿಕೆಯಾಗಿ ಈ ಕೆಳಕಂಡಂತೆ ಪರಿಗಣಿಸಲಾಗಿದೆ.

| ಗುಂಪು | ಮಾಸಿಕ ವಂತಿಕೆ |
|---|---|
| ಎ ಗುಂಪು | ರೂ.1000 |
| ಬಿ ಗುಂಪು | ರೂ.500 |
| ಸಿ ಗುಂಪು | ರೂ.350 |
| ಡಿ ಗುಂಪು | ರೂ. 250 |

ಈ ಸಂಬಂಧ ಸರ್ಕಾರದಿಂದ ಪ್ರತ್ಯೇಕ ಸೂಚನೆಗಳನ್ನು ನೀಡಲಾಗುವುದು.

**29. ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಸದಸ್ಯರು ಯೋಜನೆಗೆ ಒಳಪಡುವುದು (Enrollment Procedure)**

ಈ ಸಂಬಂಧ ಸರ್ಕಾರದಿಂದ ಪ್ರತ್ಯೇಕ ಸೂಚನೆಗಳನ್ನು ನೀಡಲಾಗುವುದು.

**30. ಯೋಜನೆಯ ನಿರ್ವಹಣೆಗಾಗಿ ವಿವಿಧ ಸಮಿತಿಗಳ ರಚನೆ: *'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ'*** ಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಆರ್ಥಿಕ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಿಂದ ಜಾರಿಗೊಳಿಸಲಿದೆ. ಈ ಯೋಜನೆಯ ಸಮರ್ಪಕ ಹಾಗೂ ಸುಸೂತ್ರ

ನಿರ್ವಹಣೆಗಾಗಿ ವಿವಿಧ ಹಂತಗಳಲ್ಲಿ ಈ ಕೆಳಕಂಡ ವಿವಿಧ ಸಮಿತಿಗಳನ್ನು ರಚಿಸಲಾಗುವುದು:

1.ರಾಜ್ಯ ಮಟ್ಟದ ಉನ್ನತಾಧಿಕಾರ ಸಮಿತಿ (STATE LEVEL HIGH POWER COMMITTEE-SLHC)

2.ರಾಜ್ಯ ಮಟ್ಟದ ಸಲಹಾ ಸಮಿತಿ (STATE LEVEL ADVISORY COMMITTEE-SLAC)

3. SAST ಮಟ್ಟದ ತಾಂತ್ರಿಕ ಸಮಿತಿ (SAST LEVEL TECHNICAL COMMITTEE-SLTC

4. ಜಿಲ್ಲಾ ನೋಂದಣಿ ಮತ್ತು ಶಿಸ್ತು ಸಮಿತಿ (DISTRICT EMPANELMENT AND DISCIPLINARY COMMITTEE –DE&DC)

ಮೇಲಿನ ಸಮಿತಿಗಳ ರಚನೆ ಹಾಗೂ ಅಧಿಕಾರ ಮತ್ತು ಅವುಗಳು ನಿರ್ವಹಿಸಬೇಕಾದ ವಿಷಯಗಳ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

**31. ವಿಶೇಷ ಸಂದರ್ಭಗಳು ಹಾಗೂ ಪ್ರಕರಣಗಳು:**

1. **ಹೊರರಾಜ್ಯದ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆ:** ಈ ಯೋಜನೆಯಡಿ ನೋಂದಾಯಿಸಲ್ಪಡದೇ ಇರುವ ಹೊರರಾಜ್ಯದಲ್ಲಿರುವ ಆಸ್ಪತ್ರೆಯಲ್ಲಿ ತುರ್ತು ಸಂದರ್ಭಗಳಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಯೋಜನೆಯಲ್ಲಿ ನಿಗದಿಪಡಿಸಿರುವ ದರಗಳಿಗೆ ಸೀಮಿತಗೊಳಿಸಿ ಅರ್ಹತಾದಾಯಕ ಮೊತ್ತವನ್ನು 1963 ನಿಯಮಗಳಂತೆ ಮರುಪಾತಿಸಲು ನಿಯಮಾನುಸಾರ ಪರಿಗಣಿಸಲಾಗುವುದು.
2. **ವೈದ್ಯಕೀಯ ವಿಮೆ ಅನ್ವಯವಾಗುವ ಸಂದರ್ಭಗಳು**: ಯಾವುದೇ ವಿಮೆ ಸಂದರ್ಭದಲ್ಲಿ ನೌಕರ ಅಥವಾ ಆತನ ಕುಟುಂಬದ ಸದಸ್ಯರು ಈ ಯೋಜನೆಯಡಿ ಚಿಕಿತ್ಸೆ ಪಡೆಯಬಹುದಾಗಿದೆ. ಆದರೆ ಸರ್ಕಾರಿ ನೌಕರ ಅಥವಾ ಆತನ ಕುಟುಂಬದ ಯಾವುದೇ ಸದಸ್ಯರು ಈ ಯೋಜನೆಯಡಿ ನೋಂದಾಯಿತ ವೈದ್ಯಕೀಯ ಸಂಸ್ಥೆಯಲ್ಲಿ ಯಾವುದೇ ವೈದ್ಯಕೀಯ ವಿಮೆಯಡಿ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಮರುಪಾವತಿ ಪಡೆದಿದ್ದಲ್ಲಿ ಅದನ್ನು ಘೋಷಿಸತಕ್ಕದ್ದು. ಅಂತಹ ಸಂದರ್ಭದಲ್ಲಿ KASS ದರಗಳನ್ವಯ ಕಡಿಮೆ ಬೀಳುವ ಮೊತ್ತವನ್ನು ಮಾತ್ರ SAST ನಿಂದ ನೌಕರನಿಗೆ ಹಿಂಬರಿಸಲಾಗುವುದು. ಯಾವುದೇ ವಿಮಾ ಮೊತ್ತವು ಚಿಕಿತ್ಸೆ ಪಡೆದ ನಂತರ ನೌಕರನಿಗೆ ಅಥವಾ ಆತನ ಕುಟುಂಬದ ಸದಸ್ಯನಿಗೆ ವಿಮಾ ಸಂಸ್ಥೆಯಿಂದ ಮರುಪಾವತಿಸಲ್ಪಟ್ಟಲ್ಲಿ ಅಂತಹ ಮಾಹಿತಿಯನ್ನು ಸರ್ಕಾರಿ ನೌಕರ ತಪ್ಪದೇ ಸರ್ಕಾರಕ್ಕೆ ಹಾಗೂ SASTಗೆ ವರದಿ ಮಾಡತಕ್ಕದ್ದು ಹಾಗೂ ಸಂದರ್ಭಾನುಸಾರ ಸರ್ಕಾರ ಅಥವಾ SAST ನಿಂದ ಈಗಾಗಲೇ ಪಡೆದ ಮೊತ್ತವನ್ನು ಹಿಂದಿರುಗಿಸಲು ಆತ ಬದ್ಧನಾಗಿರತಕ್ಕದ್ದು. ತುರ್ತು ಸಂದರ್ಭಗಳಲ್ಲಿ ನೋಂದಾಯಿತವಲ್ಲದ ವೈದ್ಯಕೀಯ ಸಂಸ್ಥೆಯಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆಗೆ ಕೂಡ ಇದು ಅನ್ವಯವಾಗುತ್ತದೆ.

3. **ರಸ್ತೆ ಅಪಘಾತ ಅಥವಾ ಇತರೆ ಅಪಘಾತ ಪ್ರಕರಣಗಳು/ ಅಪರಾಧಿಕ ಪ್ರಕರಣಗಳು (Accidents/Medico legal cases/Criminal cases)**: ಇಂತಹ ಘಟನೆ ನಡೆದ ಸಂದರ್ಭದಲ್ಲಿ, ಸರ್ಕಾರಿ ನೌಕರ ಅಥವಾ ಆತನ ಕುಟುಂಬದ

ಸದಸ್ಯರು ನೊಂದಾಯಿತ ವೈದ್ಯಕೀಯ ಸಂಸ್ಥೆಯಲ್ಲಿ ಈ ಯೋಜನೆಯಡಿ ಚಿಕಿತ್ಸೆ ಪಡೆಯಬಹುದಾಗಿದೆ. ಆದರೆ ಸರ್ಕಾರಿ ನೌಕರ ಅಥವಾ ಆತನ ಕುಟುಂಬದ ಸದಸ್ಯರು ರಸ್ತೆ ಅಪಘಾತ ಅಥವಾ ಇತರೆ ಅಪಘಾತ ಸಂದರ್ಭದಲ್ಲಿ ಯಾವುದೇ ನ್ಯಾಯಾಲಯದಿಂದ/ವಿಮಾ ಸಂಸ್ಥೆಯಿಂದ ಅಥವಾ ಇತರ ಯಾವುದೇ ಮೂಲದಿಂದ ಪರಿಹಾರದ ರೂಪದಲ್ಲಿ ಚಿಕಿತ್ಸೆಯ ವೆಚ್ಚದ ಮರುಪಾವತಿ ಪಡೆದಿದ್ದಲ್ಲಿ ಅದನ್ನು ಘೋಷಿಸತಕ್ಕದ್ದು. ಅಂತಹ ಸಂದರ್ಭದಲ್ಲಿ KASS ದರಗಳನ್ವಯ ಕಡಿಮೆ ಬೀಳುವ ಮೊತ್ತವನ್ನು ಮಾತ್ರ SAST ನಿಂದ ನೌಕರನಿಗೆ ಹಿಂಬರಿಸಲಾಗುವುದು. ಯಾವುದೇ ಪರಿಹಾರವು ಚಿಕಿತ್ಸೆ ಪಡೆದ ನಂತರ ನೌಕರನಿಗೆ ಅಥವಾ ಆತನ ಕುಟುಂಬದ ಸದಸ್ಯನಿಗೆ ಯಾವುದೇ ಮೂಲಗಳಿಂದ ಪಾವತಿಸಲ್ಪಟ್ಟಲ್ಲಿ ಅಂತಹ ಮಾಹಿತಿಯನ್ನು ಸರ್ಕಾರಿ ನೌಕರ ತಪ್ಪದೇ ಸರ್ಕಾರಕ್ಕೆ ಹಾಗೂ SAST ಗೆ ವರದಿ ಮಾಡತಕ್ಕದ್ದು ಹಾಗೂ ಸಂದರ್ಭಾನುಸಾರ ಸರ್ಕಾರ ಅಥವಾ SAST ನಿಂದ ಈಗಾಗಲೇ ಪಡೆದ ಮೊತ್ತವನ್ನು ಹಿಂದಿರುಗಿಸಲು ಆತ ಬದ್ಧನಾಗಿರತಕ್ಕದ್ದು. ತುರ್ತು ಸಂದರ್ಭಗಳಲ್ಲಿ ನೋಂದಾಯಿತವಲ್ಲದ ವೈದ್ಯಕೀಯ ಸಂಸ್ಥೆಯಲ್ಲಿ ಪಡೆದ ಚಿಕಿತ್ಸೆಗೆ ಕೂಡ ಇದು ಅನ್ವಯವಾಗುತ್ತದೆ.

4. **ಅಧಿಕೃತ ಕರ್ತವ್ಯ ಅಥವಾ ತರಬೇತಿಯಂತಹ ಕಾರ್ಯಕ್ರಮಗಳ ಸಂದರ್ಭದಲ್ಲಿ ವಿದೇಶದಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆ:** ಅಂತಹ ಪ್ರಕರಣಗಳಲ್ಲಿ 1963 ನಿಯಮಗಳಂತೆ ಪರಿಶೀಲಿಸಿ ಅರ್ಹತಾದಾಯಕ ಮೊತ್ತವನ್ನು ಮಾತ್ರ ನಿಯಮ ಸಡಿಲಿಸಿ ಮಂಜೂರು ಮಾಡಲಾಗುವುದು.

**32. ಯೋಜನೆಯ ಅಧಿಕೃತ ಜಾಲತಾಣ**: (Official Web site): SAST ಸಂಸ್ಥೆಯು ಈ ಯೋಜನೆಯ ಮಾಹಿತಿಯನ್ನು ತಿಳಿಸುವ ಉದ್ದೇಶಕ್ಕಾಗಿ ಒಂದು ಪ್ರತ್ಯೇಕ ಜಾಲತಾಣವನ್ನು ಅಭಿವೃದ್ಧಿ ಪಡಿಸುವುದು.

**33.** ಮೇಲೆ (3) ಹಾಗೂ (4) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ SAST ಸಂಸ್ಥೆಯಲ್ಲಿ ಒಂದು ಪ್ರತ್ಯೇಕ KASS ಕೋಶವನ್ನು ರಚಿಸಲು ಕೆಲವು ಹುದ್ದೆಗಳ ಸೃಜನೆಯೊಂದಿಗೆ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ ಹಾಗೂ ಯೋಜನೆಯ ಅನುಷ್ಠಾನಕ್ಕಾಗಿ, ಅಂದರೆ ಸಿಬ್ಬಂದಿ ವೇತನ ಭತ್ಯೆಗಳು, ತಂತ್ರಜ್ಞಾನ ಅಭಿವೃದ್ಧಿ ಹಾಗೂ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಅನುದಾನ ಬಿಡುಗಡೆ ಮಾಡಲಾಗಿದೆ. ಅದಲ್ಲದೇ ಯೋಜನೆಗೆ ಸಂಬಂಧಿಸಿದಂತೆ ಕೆಲವು ದಾಖಲೆಗಳನ್ನು (MOU ಇತ್ಯಾದಿ) ರೂಪಿಸಲು ಸರ್ಕಾರದಿಂದ ಸೂಚನೆಗಳನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ**'ಯನ್ನು ಜಾರಿಗೊಳಿಸಲು ಅಗತ್ಯವಿರುವ ಎಲ್ಲಾ ಏರ್ಪಾಡುಗಳನ್ನು ಮೂರು ತಿಂಗಳಲ್ಲಿ ಕೈಗೊಳ್ಳುವಂತೆ ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರಿಗೆ ಸೂಚನೆಗಳನ್ನು ನೀಡಲಾಗಿದೆ.

**34.** ಉದ್ದೇಶಿತ ಯೋಜನೆಯು ಸರ್ಕಾರಿ ನೌಕರರ ಕಲ್ಯಾಣ ಯೋಜನೆಯಾಗಿದ್ದು ಇದನ್ನು ನೌಕರರು ಯಾವುದೇ ರೀತಿಯಲ್ಲಿ ದುರ್ಬಳಕೆ ಮಾಡಿದಲ್ಲಿ ಈ ಯೋಜನೆಯಡಿಯಲ್ಲಿನ ನೊಂದಾವಣೆಯನ್ನು ರದ್ದುಪಡಿಸುವುದು ಸೇರಿದಂತೆ ಸೇವಾ ನಿಯಮಗಳನುಸಾರ ಅಂತಹ ನೌಕರರು ಶಿಸ್ತುಕ್ರಮಕ್ಕೆ ಒಳಪಡುತ್ತಾರೆ.

**35.** ಮುಂದುವರೆದು, ಈ ಯೋಜನೆಯಡಿಯಲ್ಲಿ ನೌಕರರ ಕುಂದುಕೊರತೆಗಳಿಗೆ ಸ್ಪಂದಿಸಲು ಕುಂದುಕೊರತೆಗಳ ನಿವಾರಣೆಗೆ ಈಗಿರುವ ವ್ಯವಸ್ಥೆಯಲ್ಲಿಯೇ ಸೂಕ್ತ ತಂತ್ರಜ್ಞಾನವನ್ನು SAST ಅಳವಡಿಸಿಕೊಳ್ಳತಕ್ಕದ್ದು. ಅಲ್ಲದೇ, ನೌಕರರಿಗೆ ಯೋಜನೆಯ ಅರಿವು ನೀಡಲು ಹಾಗೂ ಚಿಕಿತ್ಸೆಯ ಹಂತದ ಮಾಹಿತಿ ಒದಗಿಸಲು ಸಹಾಯಕ್ಕಾಗಿ

ಸೇವೆಯನ್ನು (helpline) ಕೂಡ ಪ್ರಾರಂಭಿಸಲು ಕ್ರಮವಹಿಸುವುದು. ಇದೇ ರೀತಿಯ ಸೌಲಭ್ಯವನ್ನು ಸಂಬಂಧಿಸಿದ ನೊಂದಾಯಿತ ಖಾಸಗಿ ಆಸ್ಪತ್ರೆಯಲ್ಲಿ ಕೂಡ ಕಲ್ಪಿಸಲು ಖಾಸಗಿ ಆಸ್ಪತ್ರೆಗಳಿಗೆ ಅವಶ್ಯಕ ಸೂಚನೆಗಳನ್ನು ನೀಡುವುದು.

**36.** ಈ ಯೋಜನೆಯ ಜಾರಿಗಾಗಿ ಮಾರ್ಗಸೂಚಿ ರೂಪದಲ್ಲಿ ಮೇಲಿನ ಸೂಚನೆಗಳನ್ನು ನೀಡಲಾಗಿದೆ. ವಾಸ್ತವವಾಗಿ ಯೋಜನೆಯು ಜಾರಿಗೊಳ್ಳುವ ಸಂದರ್ಭದಲ್ಲಿ ಸರ್ಕಾರದಿಂದ ಪರಿಷ್ಕೃತ ಸೂಚನೆಗಳನ್ನು ನೀಡಲಾಗುವುದು.

**37.** ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ:23.08.2022 ರ ಹಿಂಬರಹ ಸಂಖ್ಯೆ: ಆಇ 242 ವೆಚ್ಚ-12/2022 ರಲ್ಲಿ ಮತ್ತು ಯೋಜನಾ ಇಲಾಖೆಯು ದಿನಾಂಕ:30.08.2022 ರ ಹಿಂಬರಹ ಸಂಖ್ಯೆ: PDS-PFO/58/2022ರಲ್ಲಿ ನೀಡಿರುವ ಸಹಮತದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

05/09/2022

**(ನಾಗರತ್ನ ವಿ. ಪಾಟೀಲ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2)

ಸಂಕಲನಕಾರರು, ಇ-ರಾಜ್ಯಪತ್ರ, ಬೆಂಗಳೂರು.

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)/(ಇ&ಆರ್ಎಸ್-ಎ)/(ಎ&ಇ),ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
9. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
10. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.

11. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
12. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು, ರಾಜ ಭವನ, ಬೆಂಗಳೂರು.
13. ಯೋಜನಾ ನಿರ್ದೇಶಕರು, ಖಜಾನೆ-2, ಖಜಾನೆ ಆಯುಕ್ತರ ಕಛೇರಿ, 6ನೇ ಮಹಡಿ, ಕೆ.ಪಿ.ಟಿ.ಸಿ.ಎಲ್. ಅರಮನೆ ರಸ್ತೆ, ಬೆಂಗಳೂರು.
14. ಎಲ್ಲಾ ಇಲಾಖಾ ಮುಖ್ಯಸ್ಥರು.
15. ಎಲ್ಲಾ ಪ್ರಾದೇಶಿಕ ಆಯುಕ್ತರು.
16. ಎಲ್ಲಾ ಜಿಲ್ಲಾಧಿಕಾರಿಗಳು/ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
17. ಮಹಾ ನಿಬಂಧಕರು, ಕರ್ನಾಟಕ ಉಚ್ಛ ನ್ಯಾಯಾಲಯ, ಬೆಂಗಳೂರು.
18. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
19. ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕಂದಾಯ ಭವನ, ಕೆ.ಜಿ.ರಸ್ತೆ, ಬೆಂಗಳೂರು.
20. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು.
21. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
22. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
23. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನಂ.10, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ- 110011.
24. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ವಿಷಯ ಸಂಖ್ಯೆ: ಸಿ: 298/2021).
25. ರಾಜ್ಯಾಧ್ಯಕ್ಷರು, ಕರ್ನಾಟಕ ಸರ್ಕಾರಿ ನೌಕರರ ಸಂಘ, ಕಬ್ಬನ್ ಪಾರ್ಕ್, ಬೆಂಗಳೂರು.
26. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-12) ವಿಧಾನಸೌಧ.
27. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ).
28. ಶಾಖಾ ರಕ್ಷಾ ಕಡತ/ ಬಿಡಿ ಪ್ರತಿಗಳು.

ಈ ಆದೇಶವನ್ನು ಸರ್ಕಾರದ ಅಧಿಕೃತ ಜಾಲತಾಣ https://dpar.karnataka.gov.in ರಲ್ಲಿ ವೀಕ್ಷಿಸಬಹುದು.

*****